ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಬಿ. ಬಜಂತ್ರಿ

ಶ್ರೀ ಎಸ್. ಮೂರ್ತಿ -ವಿರುದ್ಧ ವಿಶೇಷ ಮಂಡಳಿ, ಕರ್ನಾಟಕ ವಿಧಾನ ಸಭಾ ಸಚಿವಾಲಯ ಮತ್ತು ಇತರರು*

ರಿಟ್ ಅರ್ಜಿಸಂಖ್ಯೆ:537/2019 (ಎಸ್ –ಆರ್ ಇಎಸ್), ದಿನಾಂಕ 2ನೇ ಜುಲೈ 2020

ನ್ಯಾಯಮೂರ್ತಿ ಶ್ರೀ ಪಿ.ಬಿ. ಬಜಂತ್ರಿ:

ಪ್ರಸ್ತುತ ಅರ್ಜಿಯಲ್ಲಿ, ಅರ್ಜಿದಾರನು 2016-17ರ ಅವಧಿಯಲ್ಲಿ, ಕರ್ನಾಟಕ ವಿಧಾನಸಭಾ ಸಚಿವಾಲಯದಲ್ಲಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸುತ್ತಿದ್ದಾಗ, ಬೆಳಗಾವಿಯ ಸುವರ್ಣ ವಿಧಾನ ಸೌಧದಲ್ಲಿ ನಡೆದ ಚಳಿಗಾಲದ ಅಧಿವೇಶನದಲ್ಲಿ ಸರ್ಕಾರವು ಮಾಡಿದ್ದ ಕೆಲವು ವೆಚ್ಚಗಳ ಸಂಬಂಧದಲ್ಲಿ ಅರ್ಜಿದಾರನು ಹಣಕಾಸು ಅಕ್ರಮಗಳನ್ನು ಎಸಗಿದ್ದಾನೆಂಬ ಆರೋಪದ ಮೇಲೆ ವಿಶೇಷ ಮಂಡಳಿಯ ಆದೇಶಗಳ ಮೇರೆಗೆ ಕರ್ನಾಟಕ ವಿಧಾನಸಭಾ ಸಚಿವಾಲಯದ (ಇದರಲ್ಲಿ ಇನ್ನು ಮುಂದೆ ಸಂಕ್ಷಿಪ್ತವಾಗಿ ' ಕೆಎಲ್ಎಎಸ್ ' ಎಂದು ಉಲ್ಲೇಖಿಸಲಾಗಿದೆ) ಕಚೇರಿಯು ಕರ್ನಾಟಕ ವಿಧಾನಸಭಾ ಸಚಿವಾಲಯ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು, 2003 ರ (ಇನ್ನು ಮುಂದೆ ಸಂಕ್ಷಿಪ್ತವಾಗಿ ' ನಿಯಮಗಳು, 2003 ' ಎಂದು ಉಲ್ಲೇಖಿಸಲಾಗಿದೆ) ಅನುಸೂಚಿ-II ರೊಂದಿಗೆ ಓದಲಾದ 8 ಮತ್ತು90) ನಿಯಮಗಳ ಅಡಿಯಲ್ಲಿ ಮತ್ತು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 ರ (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಸಿಸಿಎ ನಿಯಮಗಳು ' ಎಂದು ಉಲ್ಲೇಖಿಸಲಾಗಿದೆ) 10 ನೇ ನಿಯಮದ ಅಡಿಯಲ್ಲಿ ಹೊರಡಿಸಿದ ದಿನಾಂಕ 27-12-2018ರ ಅಮಾನತು ಆದೇಶವನ್ನು ಟೀಕಿಸಿದ್ದಾನೆ.ಈ ಘಟನೆಗಳಿಂದ ಉಂಟಾದ ಆರೋಪಗಳ ಹಿನ್ನೆಲೆಯಲ್ಲಿ ಅಂದಿನ ಸ್ಪೀಕರ್ರವರು ಯುಕ್ತಾಯುಕ್ತ ವಿಚಾರಣೆ ಕೈಗೊಂಡು ಒಂದು ವಾರದೊಳಗಾಗಿ ವರದಿ ಸಲ್ಲಿಸುವಂತೆ 23-11-2018ರಂದು ಮುಖ್ಯ ಕಾರ್ಯದರ್ಶಿಯವರಿಗೆ ಒಂದು ಟಿಪ್ಪಣಿಯನ್ನು ಕಳುಹಿಸಿದ್ದರು.ಆ ಟಿಪ್ಪಣಿಗೆ ಅನುಸಾರವಾಗಿ, ಆರ್ಥಿಕ ಇಲಾಖೆಯು, ಕರ್ನಾಟಕ ರಾಜ್ಯ ಲೆಕ್ಕಪತ್ರ ಇಲಾಖೆಯ ಹೆಚ್ಚುವರಿ ನಿರ್ದೇಶಕರ ಅಧ್ಯಕ್ಷತೆಯಲ್ಲಿ 5 ಮಂದಿ ಸದಸ್ಯರ ತಂಡವನ್ನು ರಚಿಸಿತು.ವರದಿಯನ್ನು ಮುಖ್ಯ ಕಾರ್ಯದರ್ಶಿಯವರು ಕಳುಹಿಸಿದರು.ಅರ್ಜಿದಾರನು ಎಸಗಿದನೆಂದು ಹೇಳಲಾದ ಕೆಲವು ಹಣಕಾಸು ಅಕ್ರಮಗಳು ನಡೆದಿದ್ದವು ಎಂದು ಕೆಎಲ್ಎಎಸ್ ಅಭಿಪ್ರಾಯಪಟ್ಟಿದೆ.ಆದ್ದರಿಂದ, ಅವನನ್ನು 27-12-2018 ರಂದು ಅಮಾನತುಗೊಳಿಸಲಾಯಿತು.

2. ಅರ್ಜಿದಾರನು 27-12-2018 ರ ಅಮಾನತು ಆದೇಶದಿಂದ ಬಾಧಿತನಾಗಿ, ವಿವಿಧ ಕಾರಣಗಳ ಮೇಲೆ ಈ ಅರ್ಜಿಯನ್ನು ಸಲ್ಲಿಸಿ, ಮಧ್ಯಂತರ ಪರಿಹಾರಕ್ಕಾಗಿ ಸಹ ಕೋರಿದ್ದಾರೆ.ದಿನಾಂಕ: 26-03-2019 ರಂದು, ಮಧ್ಯಂತರ ಕೋರಿಕೆಯ ಪರಿಗಣನೆಗಾಗಿ ವಿಷಯವನ್ನು ಆಲಿಸಲಾಯಿತು ಮತ್ತು ಅದು ತಿರಸ್ಕೃತವಾಯಿತು.ಮಧ್ಯಂತರ ಪರಿಹಾರವನ್ನು ತಿರಸ್ಕರಿಸಿದ್ದರಿಂದ ಬಾಧಿತನಾದ ಅರ್ಜಿದಾರನು, ರಿಟ್ ಅಪೀಲು ಸಂಖ್ಯೆ.1040/2019 ರಲ್ಲಿ ಅಪೀಲು ಹೂಡಿದನು ಮತ್ತು ರಿಟ್ ಅಪೀಲನ್ನುದಿನಾಂಕ: 19-12-2019 ರಂದು ವಿಲೇವಾರಿ ಮಾಡಲಾಯಿತು.ಆದೇಶದ ಉದ್ಧತಭಾಗವನ್ನು ಈ ಕೆಳಗಿನಂತೆ ಓದಲಾಗಿದೆ:

( 1) ಮಾನ್ಯ ಏಕ ಸದಸ್ಯ ನ್ಯಾಯಾಧೀಶರು ಯಾವ ತಪ್ಪನ್ನೂ ಮಾಡಿಲ್ಲ ಎಂದು ನಾವು ಅಭಿಪ್ರಾಯಪಟ್ಟಿದ್ದೇವೆ;

(ii) ಆದಾಗ್ಯೂ, ಪ್ರಶ್ನಿತ ಆದೇಶದಲ್ಲಿ ಹಸ್ತಕ್ಷೇಪ ಮಾಡಲು ನಾವು ನಿರಾಕರಿಸುವಾಗ, ಅಪೀಲುದಾರನನ್ನು ಇಲಾಖಾ/ಶಿಸ್ತು ವಿಚಾರಣಾ ವ್ಯವಹರಣೆಯನ್ನು ಕೈಗೊಳ್ಳದೆ ದೀರ್ಘಕಾಲ ಅಮಾನತ್ತಿನಲ್ಲಿ ಇಡಲು ಸಾಧ್ಯವಿಲ್ಲ ಎಂಬುದನ್ನು ನಾವು ಇಲ್ಲಿ ಗಮನಿಸಬೇಕು.ಆದುದರಿಂದ, ಸೂಕ್ತ ಸಮಯದೊಳಗಾಗಿ ಇಲಾಖಾ ವಿಚಾರಣೆಯನ್ನು ಕೈಗೊಳ್ಳಲು ಎದುರುದಾರ-ಪ್ರಾಧಿಕಾರಗಳು ವಿಫಲವಾದರೆ, ಮತ್ತು/ಅಥವಾ ಸೂಕ್ತ ಸಮಯದೊಳಗಾಗಿ ವಿಚಾರಣೆಯನ್ನು ಮುಕ್ತಾಯಗೊಳಿಸಲು ವಿಫಲವಾದರೆ, ಅಮಾನತು ಆದೇಶವನ್ನು ರದ್ದುಪಡಿಸಲು ಕೋರಿ, ಹೊಸ ಅರ್ಜಿಯನ್ನು ಸಲ್ಲಿಸಲು ಅಪೀಲುದಾರನಿಗೆ ಸದಾ ಮುಕ್ತ ಅವಕಾಶವಿರುತ್ತದೆ;

(iii) ಈ ಆದೇಶದಲ್ಲಿ ನೀಡಲಾದ ಅಭಿಪ್ರಾಯೋಕ್ತಿಗಳನ್ನು ಮತ್ತು ದಾಖಲಿಸಿದ ತೀರ್ಮಾನಗಳನ್ನು, ಮೇಲ್ನೋಟಕ್ಕೆ ಕಂಡುಬರುವ ಸಂಗತಿಯನ್ನು ಪರಿಶೀಲಿಸುವ ಉದ್ದೇಶಗಳಿಗಾಗಿ ಮಾತ್ರ ನೀಡಲಾಗಿದ್ದು, ಮಾನ್ಯ ಏಕ ನ್ಯಾಯಾಧೀಶರು ಸದರಿ ಮೇಲ್ನೋಟದ ತೀರ್ಮಾನಗಳಿಂದ ಪ್ರಭಾವಿತರಾಗದೆ, ರಿಟ್ ಅರ್ಜಿಯನ್ನು ವಿಲೇವಾರಿ ಮಾಡತಕ್ಕದ್ದು ಎಂದು ನಾವು ಸ್ಪಷ್ಟಪಡಿಸುತ್ತೇವೆ.

(iv) ಮೇಲ್ಕಂಡ ಅಭಿಪ್ರಾಯಗಳಿಗೆ ಒಳಪಟ್ಟು, ಅಪೀಲನ್ನು ವಜಾಗೊಳಿಸಲಾಗಿದೆ, ವೆಚ್ಚಗಳಿಗೆ ಸಂಬಂಧಿಸಿ ಯಾವುದೇ ಆದೇಶವಿಲ್ಲ. ವಿಷಯ ಹೀಗಿರುವಾಗ, ಅರ್ಜಿದಾರನು ನಿರ್ದೇಶನಕ್ಕಾಗಿ ಮಧ್ಯಂತರ ಅರ್ಜಿಯನ್ನು ಎಂದರೆ, ಐ.ಎ .1/2020 ನ್ನು ಸಲ್ಲಿಸಿದ್ದು, ಅದರಲ್ಲಿ ಅರ್ಜಿದಾರನಿಗೆ ಕರ್ನಾಟಕ ಸಿವಿಲ್ ಸೇವಾ ನಿಯಮಗಳಿಗೆ (ಇನ್ನು ಮುಂದೆ ಸಂಕ್ಷಿಪ್ತವಾಗಿ ' ಕೆಸಿಎಸ್ಆರ್ ' ಎಂದು ಉಲ್ಲೇಖಿಸಲಾಗಿದೆ) ಅನುಸಾರವಾಗಿ ಜೀವನಾಂಶ ಭತ್ಯೆಯನ್ನು ಪಾವತಿಸಿಲ್ಲ ಎಂಬುದನ್ನು ಎತ್ತಿ ತೋರಿಸಲಾಯಿತು.ಈತನ್ಮಧ್ಯೆ, ಆಕ್ಷೇಪಣೆ/ವಿವರಣೆ ಸಲ್ಲಿಸಲು ಎರಡು ವಾರಗಳ ಗಡುವನ್ನು ನೀಡುವಾಗ,ದಿನಾಂಕ: 02-02-2019 ರಂದು ಆರೋಪಗಳ ಪಟ್ಟಿಯನ್ನು ಸಲ್ಲಿಸಲಾಯಿತು.ಹಾಗಾಗಿ, ಅರ್ಜಿದಾರನುದಿನಾಂಕ: 22-05-2019ರಂದು ತನ್ನ ಆಕ್ಷೇಪಣೆ/ವಿವರಣೆಯನ್ನು ಸಲ್ಲಿಸಿದನು.ಅಧಿಕೃತ ಎದುರುದಾರರುದಿನಾಂಕ: 02-02-2019ರ ನೋಟೀಸ್ನೊಂದಿಗೆ ಒದಲಾದ ಆರೋಪಗಳ ಪಟ್ಟಿಗೆ ಅರ್ಜಿದಾರನ ಪ್ರತ್ಯುತ್ತರ/ಆಕ್ಷೇಪಣೆಗೆ ಕಾಯದೆ, ಆರೋಪಗಳಪಟ್ಟಿಯಲ್ಲಿ ಹೇಳಲಾದ ಆರೋಪಗಳಿಗೆ ಸಂಬಂಧಿಸಿದಂತೆ, ಅರ್ಜಿದಾರನ ವಿರುದ್ಧ ಶಿಸ್ತುಕ್ರಮ ಕೈಗೊಳ್ಳಲು ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಯನ್ನು ನೇಮಿಸಲು ಮುಂದಾದರು.ಅಲ್ಲದೆ, 3 ತಿಂಗಳುಗಳ ಅವಧಿಯೊಳಗೆ ವಿಚಾರಣಾ ಕ್ರಮಗಳನ್ನು ಪೂರ್ಣಗೊಳಿಸುವಂತೆ, ವಿಚಾರಣಾ ಪ್ರಾಧಿಕಾರಕ್ಕೆ ನಿರ್ದೇಶಿಸಲಾಯಿತು. ಆರೋಪಪಟ್ಟಿಗೆ ಅರ್ಜಿದಾರನು ನೀಡುವ ವಿವರಣೆಗೆ ಕಾಯದೆ ವ್ಯವಹರಣೆಗಳನ್ನು ನಡೆಸಲಾಯಿತು.ಅರ್ಜಿದಾರನು ಆರೋಪಗಳ ಪಟ್ಟಿಗೆ ತನ್ನ ವಿವರಣೆಯನ್ನು ಸಲ್ಲಿಸಿದ್ದಾನೆಯೇ?ಅಥವಾ ಇಲ್ಲವೇ?ಎಂಬ ಬಗ್ಗೆ ಶಿಸ್ತುಪ್ರಾಧಿಕಾರವು ದಾಖಲಿಸಿಲ್ಲ ಮತ್ತು ಅರ್ಜಿದಾರನಿಂದ ತಿಳಿದುಕೊಳ್ಳಲು ವಿಫಲವಾಗಿದೆ.

3. ಶೋಕಾಸ್ ನೋಟೀಸು ನೀಡಿದ್ದರಿಂದ ಮತ್ತುದಿನಾಂಕ: 02-02-2019ರ ಆರೋಪ ಪಟ್ಟಿಯನ್ನು ಸಲ್ಲಿಸಿದ್ದರಿಂದ ಬಾಧಿತನಾದ ಅರ್ಜಿದಾರನು, ರಿಟ್ ಅರ್ಜಿ ಸಂಖ್ಯೆ.11518/2019 ನ್ನು ಸಲ್ಲಿಸಿದ್ದು, ಅದರಲ್ಲಿ ಅವನು ಮಧ್ಯಂತರ ಪರಿಹಾರವನ್ನು ಕೋರಿದ್ದನು.ಆ ವಿಷಯವು ಎದುರುದಾರರ ಕೋರಿಕೆಯ ಮೇರೆಗೆ ಕಾಲಕಾಲಕ್ಕೆ ಮುಂದೂಡಲ್ಪಟ್ಟಿತು.ಅಂತಿಮವಾಗಿ,ದಿನಾಂಕ: 04-09-2019ರಂದು, ಈ ನ್ಯಾಯಾಲಯವು, ಈ ಮುಂದಿನ ಆದೇಶವನ್ನು ಹೊರಡಿಸಿತು:

ಅರ್ಜಿದಾರನ ಪರ ಮಾನ್ಯ ವಕೀಲರ ಮತ್ತು ಮಾನ್ಯ ಹೆಚ್ಚುವರಿ ಸರ್ಕಾರೀ ವಕೀಲರ ವಾದಗಳನ್ನು ಆಲಿಸಲಾಯಿತು. ಮಾನ್ಯ ಅಡ್ವಕೇಟ್ ಜನರಲ್ರವರು, ಎದುರುದಾರರ ಪರವಾಗಿ ಈ ವಿಷಯದಲ್ಲಿ

ಹಾಜರಾಗುತ್ತಿರುವರೆಂದು ಮಾನ್ಯ ಎಜಿಎ ನಿವೇದಿಸಿದ್ದಾರೆ.ದಿನಾಂಕ: 11-09-2019ರವರೆಗೆ ಮಾಡಿಕೊಡಬೇಕೆಂದು ಕೋರಿದ್ದಾರೆ.

ಅರ್ಜಿದಾರನ ಪರ ಮಾನ್ಯ ವಕೀಲರು ವಿಚಾರಣೆ ನಡೆಸುವ ಪ್ರಾಧಿಕಾರದ ಸಕ್ಷಮತೆಯನ್ನು ಅರ್ಜಿದಾರನು ಪ್ರಶ್ನಿಸಿದ್ದರೂ, ವಿಚಾರಣಾಧಿಕಾರಿಯು ದೈನಂದಿನ ಆಧಾರದ ಮೇಲೆ ವಿಚಾರಣಾ ವ್ಯವಹರಣೆಗಳನ್ನು ನಡೆಸಲು ಮುಂದಾಗಿದ್ದಾರೆ ಎಂಬ ಕಾರಣದ ಮೇಲೆ ವಿಚಾರಣೆಯ ಮುಂದೂಡಿಕೆಯನ್ನು ಆಕ್ಷೇಪಿಸಿರುತ್ತಾರೆ.ವಿಭಾಗೀಯ ಪೀಠವು ಸಹ, ಅದೇ ರೀತಿಯ ವಿವಾದವನ್ನು ಸಹ ನಿಲ್ಲಿಸಿದೆ ಮತ್ತು ವಿಭಾಗೀಯ ಪೀಠವು ದಾಖಲೆಗಾಗಿ ಸಮನು ಮಾಡಿದೆ ಎಂದು ಸಹ ನಿವೇದಿಸಲಾಗಿದೆ.

ವಿಷಯದ ಆ ದೃಷ್ಟಿಕೋನದಿಂದ, ಮುಂದಿನ ಸುನಾವಣೆಯ ದಿನಾಂಕದವರೆಗೆ ಯಾವುದೇ ಆದೇಶಗಳನ್ನು ಹೊರಡಿಸುವುದರಿಂದ ವಿಚಾರಣಾಧಿ ಕಾರಿಯನ್ನು ನಿರ್ಬಂಧಿಸಬೇಕು ಎಂದು ಈ ನ್ಯಾಯಾಲಯವು ಅಭಿಪ್ರಾಯಪಟ್ಟಿದೆ.

ಇದನ್ನುದಿನಾಂಕ: 13-09-2019ರಂದು ಸುನಾವಣೆಗೆ ಪಟ್ಟಿ ಮಾಡಿ.

ಅಧಿಕೃತ ಎದುರುದಾರರು, ಕಾಲಕಾಲಕ್ಕೆ ಡಿಪಿಎಆರ್ ಹೊರಡಿಸಿದ ಸರ್ಕಾರೀ ಆದೇಶಗಳ ಪ್ರಕಾರ 3 ತಿಂಗಳು, 6 ತಿಂಗಳು ಅಥವಾ 9 ತಿಂಗಳ ಕಾಲ ಕಳೆದ ನಂತರವೂ, ಅಥವಾ ಅಜಯ್ ಕುಮಾರ ಚೌಧರಿ -ವಿರುದ್ಧ ಯೂನಿಯನ್ ಆಫ್ ಇಂಡಿಯಾ ತನ್ನ ಕಾರ್ಯದರ್ಶಿ ಮುಖಾಂತರ ಮತ್ತು ಇನ್ನೊಬ್ಬರು, ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಣಯದ ಪ್ರಕಾರವೂ, ಅಮಾನತು ಆದೇಶವನ್ನು ಚ ಪುನರ್ ಪರಿಶೀಲನೆ ಮಾಡಿಲ್ಲ.ಅದಲ್ಲದೆ, 26-02-2019 ರಂದು ವಿಚಾರಣಾಧಿಕಾರಿಯನ್ನು ನೇಮಕ ಮಾಡಲಾಗಿದ್ದರೂ ಸಹ, ಅಧಿಕೃತ ಎದುರುದಾರರು ವಿಚಾರಣಾ ವ್ಯವಹರಣೆಗಳನ್ನು ಪೂರ್ಣಗೊಳಿಸಲುದಿನಾಂಕ: 04-09-2019ರವರೆಗೆ ಸಾಕಷ್ಟು ಕಾಲಾವಕಾಶವನ್ನು ಹೊಂದಿದ್ದರು.ದಿನಾಂಕ: 04-09-2019ರಿಂದ ಜಾರಿಗೆ ಬರುವಂತೆದಿನಾಂಕ: 04-09-2019ರ ಈ ನ್ಯಾಯಾಲಯದ ಮಧ್ಯಂತರ ನಿರ್ದೇಶನಕ್ಕೆ ಅನುಸಾರವಾಗಿ, ಯಾವುದೇ ಆದೇಶ ಹೊರಡಿಸುವುದರಿಂದ ವಿಚಾರಣಾಧಿಕಾರಿಯನ್ನು ನಿರ್ಬ ಂ ಧಗೊಳಿಸಲಾಯಿತು ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.ಅಧಿಕೃತ ಎದುರುದಾರರುದಿನಾಂಕ: 04-09-2019ರ ಮಧ್ಯಂತರ ನಿರ್ದೇಶನದ ಮಾರ್ಪಾಡಿಗೆ ಯಾವುದೇ ಪ್ರಯತ್ನಮಾಡಿಲ್ಲ ಅಥವಾದಿನಾಂಕ: 02-02-2019ರಂದು ಪ್ರಾರಂಭಿಸಿದ ಶಿಸ್ತುಕ್ರಮದ ಫಲಿತಾಂಶಕ್ಕೊಳಪಟ್ಟು, ಅರ್ಜಿದಾರನನ್ನು ಮೊದಲಿನ ಸ್ಥಾನಕ್ಕೆ ನೇಮಕ ಮಾಡಲು ಮುಂದಾಗಿಲ್ಲ.

4. ಮಧ್ಯಂತರ ಅರ್ಜಿಯಲ್ಲಿ, ಅರ್ಜಿದಾರನು ತನಗೆ ಜೀವನಾಧಾರ ಭತ್ಯೆಯನ್ನು ಕಾಲಕಾಲಕ್ಕೆ ಪಾವತಿಸಿರುವುದಿಲ್ಲ ಎಂದು ಹೇಳಿದ್ದಾನೆ.ಆದರೆ, ಸೆಪ್ಟೆಂಬರ್ 2019 ರವರೆಗೆ ಜೀವನಾಧಾರ ಭತ್ಯೆಯನ್ನು ಪಾವತಿಸಲಾಗಿದೆ ಎಂದು ಅಧಿಕೃತ ಎದುರುದಾರರು ವಾದಿಸಿದ್ದಾರೆ.ಅಧಿಕೃತ ಎದುರುದಾರರು ಮಧ್ಯಂತರ ಅರ್ಜಿಗೆ ವಿರುದ್ಧವಾಗಿ ತಮ್ಮ ಪ್ರತಿವಾದವನ್ನು ದಾಖಲಿಸಿದ್ದು, ಅದರಲ್ಲಿ, ಜೀವನಾಂಶವನ್ನು ಸೆಪ್ಟೆಂಬರ್ 2019 ರವರೆಗೆ ಪಾವತಿಸಲಾಗಿದೆ.ಆ ನಂತರ, ಅರ್ಜಿದಾರನ ಬ್ಯಾಂಕ್ ಖಾತೆ ಜಪ್ತಿಯಾಯಿತು ಎಂದು ಹೇಳಲಾಗಿದೆ.ಹೀಗಾಗಿ, ಆಡಳಿತಾತ್ಮಕ ಅಡಚಣೆ ಉಂಟಾಗಿತ್ತು.ಆದುದರಿಂದ,ದಿನಾಂಕ: 12-06-2020ರಂದು, ಈ ನ್ಯಾಯಾಲಯವು ಒಂದು ವಾರದೊಳಗೆ ಜೀವನಭತ್ಯೆಯ ಪಾವತಿಗೆ ಸಂಬಂಧಿಸಿದ ದಿನಾಂಕಗಳು ಮತ್ತು

ಘಟನೆಗಳೊಂದಿಗೆ ಅಫಿಡೆವಿಟ್ ಸಲ್ಲಿಸುವಂತೆ ಅಧಿಕೃತ ಎದುರುದಾರರಿಗೆ ನಿರ್ದೇಶಿಸಿದೆ.ಅಧಿಕೃತ ಎದುರುದಾರರುದಿನಾಂಕ: 25-06-2020 ರಂದು ಮಾತನಾಡಿದ್ದಕ್ಕಾಗಿ ' ಮೊಮೊ ' ಜೊತೆಗೆ ಅಫಿಡೆವಿಟ್ ಮತ್ತು ದಿನಾಂಕಗಳು ಮತ್ತುದಿನಾಂಕ: 23-06-2020ರಂದು ನಡೆದ ಘಟನೆಗಳ ವಿವರ ಸಲ್ಲಿಸಿದರು.

5. ಸೆಪ್ಟೆಂಬರ್, 2019 ರವರೆಗೆ ಅರ್ಜಿದಾರನಿಗೆ ಜೀವನಾಧಾರಭತ್ಯೆಯನ್ನು ಪಾವತಿಸಲಾಗಿದೆ ಎಂದು ಮಾನ್ಯ ಅಡ್ವಕೇಟ್ ಜನರಲ್ರುವರು ನಿವೇದಿಸಿದ್ದಾರೆ.ಅಲ್ಲದೆ, ಅರ್ಜಿದಾರರ ಸಂಬಂಧಪಟ್ಟ ಬ್ಯಾಂಕ್ ಖಾತೆಯನ್ನು ವಿಚಾರಣೆಯೊಂದರಲ್ಲಿ ವಶಪಡಿಸಿಕೊಂಡ ಕಾರಣಕ್ಕಾಗಿ, 2019 ರ ಅಕ್ಟೋಬರ್ನಿಂದ ಅರ್ಜಿದಾರನಿಗೆ ಜೀವನಾಧಾರಭತ್ಯೆಯನ್ನು ನೀಡುವ ವಿಷಯದಲ್ಲಿ ಕೆಲವು ಆಡಳಿತಾತ್ಮಕ ತೊಡಕುಗಳಿವೆ.ರಾಜ್ಯ ಖಜಾನೆಯಲ್ಲಿ ಪರ್ಯಾಯ ಖಾತೆ ಸಂಖ್ಯೆಯನ್ನು ದಾಖಲಿಸುವುದು ಅಗತ್ಯವಾಗುತ್ತದೆ.ಈ ಸಂಬಂಧ, ಅರ್ಜಿದಾರನು ಪರ್ಯಾಯ ಬ್ಯಾಂಕ್ ಖಾತೆ ಸಂಖ್ಯೆಯನ್ನು ಒದಗಿಸಿಲ್ಲ.ಅರ್ಜಿದಾರನು ಅರ್ಜಿದಾರನು ಪರ್ಯಾಯ ಬ್ಯಾಂಕ್ ಖಾತೆಯ ವಿವರಗಳನ್ನು ಒದಗಿಸಿದರೆ, ಜೀವನಭತ್ಯೆಯ ಬಾಕಿ ಪಾವತಿಗೆ ಸಂಬಂಧಿಸಿದಂತೆ, ಅರ್ಜಿದಾರರು ಕುಂದುಕೊರತೆಗಳನ್ನು ಸರಿಪಡಿಸಲು ಅಗತ್ಯಕ್ರಮ ಕೈಗೊಳ್ಳಲಾಗುವುದು ಎಂದು ನಿವೇದಿಸಿಕೊಂಡಿದ್ದಾರೆ.

6. ವಿಚಾರಣೆಯನ್ನು ಪ್ರಾರಂಭಿಸಿದಾಗ, ಅರ್ಜಿದಾರನುದಿನಾಂಕ: 15-03-2019,ದಿನಾಂಕ: 27-03-2019 ಮತ್ತುದಿನಾಂಕ: 05-08-2019ರಂದು ಗೈರುಹಾಜರಾಗಿದ್ದಾನೆ ಎಂಬ ಕಾರಣಗಳಿಗಾಗಿ ಅರ್ಜಿದಾರನನ್ನು ಮತ್ತೆ ಸೇವೆಗೆ ಸೇರಿಸಿಕೊಳ್ಳಲು ಅರ್ಹನಾಗಿರುವುದಿಲ್ಲ ಎಂದು ಮಾನ್ಯ ಅಡ್ವಕೇಟ್ ಜನರಲ್ರುವರು ಬಲವಾಗಿ ವಾದಿಸಿದರು.ಅಷ್ಟೇ ಅಲ್ಲದೆ, ಅರ್ಜಿದಾರರು ತನಿಖೆಯನ್ನು ಹಾಳುಮಾಡುವ ಸಾಧ್ಯತೆಯಿದೆ ಎಂದುದಿನಾಂಕ: 14-10-2019 ರಂದು ಬೆಂಗಳೂರಿನ ಪೊಲೀಸ್ ಅಧೀಕ್ಷಕರು (ಕೇಂದ್ರ) ಅಭಿಪ್ರಾಯಪಟ್ಟಿದ್ದಾರೆ.ಮೇಲೆ ಹೇಳಲಾದ ನಿವೇದನೆಯು, ಅರ್ಜಿದಾರನು ಸಲ್ಲಿಸಿದ ಐ.ಎ .1/2020 ಕ್ಕೆ ದಾಖಲೆಗಳಿಗಾಗಿನ ಜ್ಞಾಪನಪತ್ರ, ದಿನಾಂಕಗಳ ಮತ್ತು ಘಟನೆಗಳ ಹಾಗೂ ಆಕ್ಷೇಪಣೆಗಳ ಪಟ್ಟಿಗೆ ಸಂಬಂಧಿಸಿದ್ದಾಗಿದೆ.ಅಷ್ಟೇ ಅಲ್ಲದೆ, ಅಮಾನತ್ತಿನ ಪುನರ್ಪರಶೀಲನಾ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ವಾದಿಸಲಾಯಿತು.ಅಂಥ ಪ್ರಸ್ತಾವನೆಯನ್ನುದಿನಾಂಕ: 13-12-2019ರಂದು ರವಾನಿಸಲಾಯಿತು ಮತ್ತು ರಿಟ್ ಅಪೀಲು ಸಂಖ್ಯೆ.1040/2019ದಿನಾಂಕ: 19-12-2019ರಲ್ಲಿ ತೀರ್ಮಾನವನ್ನು ಮಂಡಿಸುವ ಸಲುವಾಗಿದಿನಾಂಕ: 23-12-2019ರಂದು ಆ ಕಡತವನ್ನು ಹಿ 0 ಪಡೆಯಲಾಯಿತು ಮತ್ತು ಅದನ್ನುದಿನಾಂಕ: 04-01-2020ರಂದು ಸಲ್ಲಿಸಲಾಯಿತು.ಹೀಗಾಗಿ, ಅಮಾನತಿನ ಪುನರ್ಪರಿಶೀಲನೆಯು ನಡೆಯುತ್ತಿದೆ.

7. ಅರ್ಜಿದಾರನ ಪರ ಮಾನ್ಯ ವಕೀಲರು ಸೆಪ್ಟೆಂಬರ್ 2019 ರವರೆಗೆ ಜೀವನಾಧಾರ ಭತ್ಯೆಯ ಪಾವತಿಯ ಬಗ್ಗೆ ವಾದಿಸಿಲ್ಲ.ಜೀವನಭತ್ಯೆಯ ಬಾಕಿ ಹಣವನ್ನು ಸಂದಾಯ ಮಾಡುವುದಕ್ಕಾಗಿ ಅರ್ಜಿದಾರರು ಪರ್ಯಾಯ ಬ್ಯಾಂಕ್ ಖಾತೆಯನ್ನು ಒದಗಿಸುವನೆಂದು ನಿವೇದಿಸಲಾಗಿತ್ತು.

8. ಅರ್ಜಿದಾರನ ಪರ ವಕೀಲರುದಿನಾಂಕ: 15-03-2019ರಂದು, ಅರ್ಜಿದಾರನಿಗೆ ಹುಷಾರಿರಲಿಲ್ಲ ಎಂದು ಹೇಳುವಾಗ, ಮಾನ್ಯ ಅಡ್ವಕೇಟ್ ಜನರಲ್ರುವರ ಮೇಲೆ ಹೇಳಲಾದ ವಾದಗಳನ್ನು ವಿರೋಧಿಸಿದರು.ದಿನಾಂಕ: 27-03-2019ರಂದು, ಅರ್ಜಿದಾರನು ಕೆಲವು ದಾಖಲೆಗಳನ್ನು ಕೋರಿದ್ದನು.ಅವುಗಳನ್ನು ಅರ್ಜಿದಾರನಿಗೆ ಒದಗಿಸಿರಲಿಲ್ಲ.ಅದಲ್ಲದೆ, ಈ ನ್ಯಾಯಾಲಯವು, ರಿಟ್ ಅರ್ಜಿಸಂಖ್ಯೆ: 11518/2019 ರಲ್ಲಿ ಅರ್ಜಿದಾರನು ಕೋರಿದ ದಾಖಲೆಗಳನ್ನು ಒದಗಿಸುವಂತೆ ಪ್ರಾಧಿಕಾರಿಗಳಿಗೆ ನಿರ್ದೇಶಿಸಿದೆ.ಅದೇ ರೀತಿ, ಅರ್ಜಿದಾರನ ಕೋರಿಕೆಯ ಪ್ರಕಾರವೇದಿನಾಂಕ: 05-08-2019ರಂದು ಗೈರುಹಾಜರಾಗಲಾಗಿತ್ತು.ಹಾಗಿದ್ದರೂ ವಿಚಾರಣೆಯನ್ನು ಮುಂದಕ್ಕೆ

ಹಾಕಲು, ಅರ್ಜಿದಾರನ ಮಾಹಿತಿ ಸ್ವೀಕರಿಸದಿರುವಮಟ್ಟಿಗೆ ವಿಚಾರಣಾಧಿ ಕಾರಿಗೆ ಸುದ್ದಿ ತಲುಪದ ಕಾರಣದಿ ಂ ದಾಗಿ ಹಾಗೆ ಗೈರುಹಾಜರಾತಿಯಾಗಿತ್ತು.ವಿಚಾರಣೆಯನ್ನು ಮುಂದಕ್ಕೆ ಹಾಕುವಂತೆ ಮಾಡಿಕೊಂಡಿದ್ದ ಅರ್ಜಿದಾರನ ಕೋರಿಕೆಯನ್ನು ವಿಚಾರಣಾಧಿಕಾರಿಯು ಸ್ವೀಕರಿಸಿದ್ದಾರೆಂದು ಅರ್ಜಿದಾರನಿಗೆ ಮೇಲ್ ಸಂದೇಶದ ಮೂಲಕ ವಿಚಾರಣಾಧಿಕಾರಿಯು ಇದನ್ನು ಸ್ಪಷ್ಟಪಡಿಸಿದ್ದಾರೆ.ಆ ನಂತರ, ವಿಚಾರಣೆಯ ಪ್ರಾರಂಭದ ಕ್ರಮವನ್ನು ಪ್ರಶ್ನಿಸಿರುವ ರಿಟ್ ಅರ್ಜಿಸಂಖ್ಯೆ: 11518/2019 ರಲ್ಲಿ ಎದುರುದಾರರು ಸಹಕರಿಸಿಲ್ಲ.ಅದರ ಪರಿಣಾಮವಾಗಿ, ವಿಚಾರಣಾ ಪ್ರಾಧಿಕಾರವನ್ನು ಆದೇಶ ಹೊರಡಿಸಲು ನಿರ್ಬಂಧಿಸಲಾಯಿತು ಎಂಬಷ್ಟರಮಟ್ಟಿಗೆ,ದಿನಾಂಕ: 04-09-2019ರಂದು ಮೇಲೆ ಉಲ್ಲೇಖಿಸಲಾದ ಆದೇಶವನ್ನು ಆದೇಶವನ್ನು ಹೊರಡಿಸಲು ಹೊರಡಿಸಲು ಈ ನ್ಯಾಯಾಲಯವನ್ನು ಒತ್ತಾಯಿಸಲಾಯಿತು.ಇದರ ಜೊತೆಗೆ, ಶಿಸ್ತು ಕ್ರಮದೊಂದಿಗೆ ಮುಂದುವರೆಯಲು ಸಾಧ್ಯವಾಗುವಂತೆದಿನಾಂಕ: 04-09-2019ರ ಆದೇಶದ ಮಾರ್ಪಾಡನ್ನು ಅಥವಾ ರದ್ದತಿಯನ್ನು ಮಾಡಲು ಎದುರುದಾರರು ಯಾವುದೇ ಪ್ರಯತ್ನಗಳನ್ನು ಮಾಡಿಲ್ಲ.ಇನ್ನೊಂದು ಕಡೆಯಲ್ಲಿ, ಅವರು ಅರ್ಜಿದಾರನನ್ನು ಪುನಃ ಅದೇ ಸ್ಥಾನದಲ್ಲಿ ನೇಮಕ ಮಾಡಲು ನಿರಾಕರಿಸುತ್ತಿದ್ದರು.ದೀರ್ಘಾವಧಿಯ ಅಮಾನತು ಅನುಮತೀಯವಲ್ಲ.ಕೆಸಿಎಸ್ಆರ್ ನಿಯಮಾವಳಿಗಳ 98 ನೇ ನಿಯಮದೊಂದಿಗೆ ಓದಲಾದ, ಕಾಲಕಾಲಕ್ಕೆ ಹೊರಡಿಸಲಾದ ಡಿಪಿಎಆರ್ ಸುತ್ತೋಲೆಗಳ ಪ್ರಕಾರ, ಹಾಗೆಯೇ ಅಜಯ್ ಕುಮಾರ್ ಚೌಧರಿ (ಮೇಲೆ ಹೇಳಿದ) ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಮಾನದ ಪ್ರಕಾರ ಪ್ರಾಧಿಕಾರಗಳು 3 ತಿಂಗಳು, ಚ 6 ತಿಂಗಳು, 9 ತಿಂಗಳಂತೆ ಕಾಲಕಾಲಕ್ಕೆ ಅಮಾನತಿನ ಪುನರ್ಪರಿಶೀಲನೆಯನ್ನು ನಡೆಸುವುದು ಅಗತ್ಯವಾಗಿತ್ತು.

9. ಅರ್ಜಿದಾರನು ಶಿಸ್ತು ವಿಚಾರಣೆಯಲ್ಲಿ ಗೈರುಹಾಜರಾಗಿದ್ದರಿಂದ ಮತ್ತು ಅವನು ವಿಚಾರಣೆಗೆ ಸಹಕರಿಸಿಲ್ಲದ್ದರಿಂದಾಗಿ ಅರ್ಜಿದಾರನ ಅಮಾನತು ಅವಧಿ ಮುಂದುವರಿಯಿತು ಎಂಬುದು ಮಾನ್ಯ ಅಡ್ವಕೇಟ್ ಜನರಲ್ರುವರ ವಾದವಾಗಿದೆ.ಅಷ್ಟೇ ಅಲ್ಲದೆ, ಅಮಾನತು ಪುನರ್ಪರಿಶೀಲನಾ ಪ್ರಕ್ರಿಯೆಯು ವಿಶೇಷ ಮಂಡಳಿಯ ಮುಂದೆ ಪರಿಗಣನೆಯಲ್ಲಿದೆ.ಶಿಸ್ತು ಪ್ರಾಧಿಕಾರ/ವಿಶೇಷ ಮಂಡಳಿಯುದಿನಾಂಕ: 02-02-2019ರಂದು ಅರ್ಜಿದಾರನಿಗೆ ಆರೋಪ ಪಟ್ಟಿಯನ್ನು ನೀಡಿದೆ ಮತ್ತು ಅರ್ಜಿದಾರನಿಗೆ ಎರಡು ವಾರಗಳೊಳಗೆ ತನ್ನ ವಿವರಣೆಯನ್ನು ಒದಗಿಸುವಂತೆ ಕೇಳಲಾಗಿತ್ತು ಎಂಬ ಕಾರಣಗಳಿಗಾಗಿ ಮಾನ್ಯ ಅಡ್ವಕೇಟ್ ಜನರಲ್ರುವರ ಈ ವಾದವು ಸರಿಯಲ್ಲದಿರಬಹುದು.ಆರೋಪಗಳ ಪಟ್ಟಿಗೆ ಸಂಬಂಧಿಸಿದಂತೆ ಅರ್ಜಿದಾರನ ವಿವರಣೆಗಾಗಿ ಕಾಯದೆ, ವಿಶೇಷ ಮ ಂ ಡಳಿಯು ದಿನಾಂಕ 26-02-2019 ರಂದು 3 ತಿಂಗಳ ಅವಧಿಯೊಳಗೆ ವಿಚಾರಣೆಯನ್ನು ನಡೆಸಲು ವಿಚಾರಣಾಧಿಕಾರಿಯನ್ನು ಮತ್ತು ಮಂಡನಾಧಿಕಾರಿಯನ್ನು ನೇಮಿಸಲು ಮುಂದಾಗಿದೆ.1957 ರ ನಿಯಮಾವಳಿಗಳ 11 ನೇ ನಿಯಮದ ( 5) (ಬಿ) ಉಪನಿಯಮದ ಪ್ರಕಾರ, ಶಿಸ್ತು ಪ್ರಾಧಿಕಾರವು ತಪ್ಪಿತಸ್ಥ ಸರ್ಕಾರೀ ನೌಕರನ ವಿವರಣೆಯನ್ನು ಸ್ವೀಕರಿಸದಿದ್ದಲ್ಲಿ, ಅಂತಹ ಸನ್ನಿವೇಶಗಳಲ್ಲಿ ಅವನು ಕಾರಣಗಳನ್ನು ದಾಖಲಿಸಿ ವಿಚಾರಣೆ ನಡೆಸಲು ಮುಂದಾಗಬೇಕು.ಆ ನಂತರ, ಅರ್ಜಿದಾರನುದಿನಾಂಕ: 22-05-2019ರಂದು ತನ್ನ ವಿವರಣೆಯನ್ನು ಸಲ್ಲಿಸಿದ್ದಾನೆ.ಅರ್ಜಿದಾರನಿಗೆ ಆರೋಪಗಳ ಪಟ್ಟಿ/ದಾಖಲೆಗಳ ಪಟ್ಟಿಯಲ್ಲಿ ಉಲ್ಲೇಖಿಸಿದ ಸಂಪೂರ್ಣ ದಾಖಲೆಗಳನ್ನು ಒದಗಿಸಿರಲಿಲ್ಲ ಎಂಬ ಕಾರಣಕ್ಕಾಗಿ, ಉತ್ತರವನ್ನು ದಾಖಲಿಸುವಲ್ಲಿ ವಿಳಂಬವಾಗಿದೆ.ಎದುರುದಾರರು ಅರ್ಜಿದಾರನು ಕೋರಿದ ದಾಖಲೆಗಳನ್ನು ಯಾವ ದಿನಾಂಕಗಳಂದು ಅವನಿಗೆ ಒದಗಿಸಲಾಯಿತು ಎಂಬ ಮಾಹಿತಿಯನ್ನು ಈ ನ್ಯಾಯಾಲಯಕ್ಕೆ ನೀಡಿಲ್ಲ.ವಾಸ್ತವವಾಗಿ, ರಿಟ್ ಅರ್ಜಿಸಂಖ್ಯೆ: 11518/2019 ಯಲ್ಲಿ, ಈ ನ್ಯಾಯಾಲಯವು ಅರ್ಜಿದಾರನಿಗೆ ಅವನು ಕೋರಿದ ದಾಖಲೆಗಳನ್ನು ಒದಗಿಸುವಂತೆ

ಎದುರುದಾರರಿಗೆ ನಿರ್ದೇಶಿಸಿದೆ ಎಂಬುದನ್ನು ಗಮನಿಸಬೇಕಿದೆ.ಅಷ್ಟೇ ಅಲ್ಲದೆ, ವಿಶೇಷ ಮಂಡಳಿ/ಶಿಸ್ತು ಪ್ರಾಧಿಕಾರವು, ಜೀವನಾಧಾರ ಭತ್ಯೆಯ ಪಾವತಿ ಮತ್ತು ಅಮಾನತಿನ ಮುಂದುವರಿಕೆ-ಇವೆರಡಕ್ಕೂ 6 ತಿಂಗಳನ್ನು ಮೀರಿ ಅರ್ಜಿದಾರನನ್ನು ಅಮಾನತ್ತಿನಲ್ಲಿ ಮುಂದುವರೆಸುವ ಕಾರ್ಯಸಾಧ್ಯತೆಯನ್ನು ಪರಿಶೀಲಿಸುವುದು ಅಗತ್ಯ ಎಂಬ ಕೆಸಿಎಸ್ಆರ್ನ 98 ನೇ ನಿಯಮಕ್ಕೆ ಎದುರುದಾರರು ಬದ್ಧರಾಗಿಲ್ಲ.ಈ ನಿಟ್ಟಿನಲ್ಲಿ, ಡಿಪಿಎಆರ್ ಕಾಲಕಾಲಕ್ಕೆ ಅಧಿಕೃತ ಜ್ಞಾಪನ/ಸುತ್ತೋಲೆಯನ್ನು ಹೊರಡಿಸಿದೆ.ಹಾಗೆಯೇ, ಅಜಯ್ ಕುಮಾರ್ ಚೌಧರಿ (ಮೇಲೆ ಹೇಳಿದ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ಈ ಬಗ್ಗೆ ತೀರ್ಪನ್ನು ನೀಡಿದೆ. ಎದುರುದಾರರು ಮೇಲೆ ಹೇಳಲಾದ ಶಾಸನದ ಉಪಬಂಧಕ್ಕೆ ಹಾಗೂ ಸಂಬಂಧಪಟ್ಟ ಆದೇಶಗಳಿಗೆ ಬದ್ಧರಾಗಿಲ್ಲ. ಅಮಾನತು ಆದೇಶವುದಿನಾಂಕ: 27-12-2018ರ ದಿನಾಂಕದ್ದಾಗಿದೆ.1957 ರ ನಿಯಮಾವಳಿಗಳ 10 ನೇ ನಿಯಮದ 6 ನೇ ಉಪನಿಯಮ ಮತ್ತು ಕೆಸಿಎಸ್ಆರ್ನ 98 ನೇ ನಿಯಮದ ಪ್ರಕಾರ ವಿಶೇಷ ಮಂಡಳಿ/ಶಿಸ್ತು ಪ್ರಾಧಿಕಾರವು ತೀರ್ಮಾನವನ್ನು ಕೈಗೊಳ್ಳಬೇಕಾದ ಅಗತ್ಯವಿತ್ತು ಹಾಗೂ ಅದು ದಾಖಲೆಗಳಲ್ಲಿ ಏನಿದೆಯೋ ಅದಕ್ಕೆ ಬದ್ಧವಾಗಿರಲಿಲ್ಲ.

10. ಜೀವನಾಧಾರ ಭತ್ಯೆಯನ್ನು ಪಾವತಿಸುವಷ್ಟರ ಮಟ್ಟಿಗೆ, ಹಾಗೆಯೇ, ಅಮಾನತು ರದ್ದಿಯಾತಿ ಆದೇಶದ ಮುಂದುವರಿಕೆಯ ಮಟ್ಟಿಗೆ, ಅಂಥ ಪ್ರಸ್ತಾವನೆಯನ್ನುದಿನಾಂಕ: 13-12-2019ರಂದು ಎಂದರೆ, ಅಮಾನತಿನ ದಿನಾಂಕದಿಂದ ಬಹುತೇಕ ಒಂದು ವರ್ಷವಾದ ಮೇಲೆ ಮೊಟ್ಟ ಮೊದಲ ಬಾರಿಗೆ ಪ್ರಾರಂಭಿಸಲಾಯಿತು.ಅಷ್ಟೇ ಅಲ್ಲದೆ, ಇಂದಿಗೆ 6 ತಿಂಗಳು ಕಳೆದುಹೋಗಿದ್ದರೂ ಈ ನಿಟ್ಟಿನಲ್ಲಿ ಯಾವುದೇ ತೀರ್ಮಾನವಾಗಿಲ್ಲ.ದಿನಾಂಕ: 04-01-2020ರಿಂದ ಯಾವುದೇ ಪ್ರಗತಿಯಾಗಿಲ್ಲ ಎಂಬುದು ದಾಖಲೆಗಳ ಅವಗಾಹನೆಯಿಂದ ಸ್ಪಷ್ಟವಾಗಿದೆ.ಹೀಗಾಗಿ, ಎದುರುದಾರರ ಕಡೆಯಿಂದಾದ, ಅದರಲ್ಲೂ ನಿರ್ದಿಷ್ಟವಾಗಿ, ಶಿಸ್ತು ಪ್ರಾಧಿಕಾರವಾಗಿರುವ ಮತ್ತು ಅರ್ಜಿದಾರನನ್ನು ಅಮಾನತುಗೊಳಿಸಿದ್ದ ವಿಶೇಷ ಮಂಡಳಿಯ ಕಡೆಯಿಂದಾದ ಸಂಪೂರ್ಣವಾಗಿ ನಿಷ್ಕ್ರಿಯತೆಯಾಗಿದೆ.

11. ಜೀವನಾಧಾರ ಭತ್ಯೆಯನ್ನು ಪಾವತಿ ಮಾಡುವುದಕ್ಕೆ ಸಂಬಂಧ ಪಡುವಷ್ಟರ ಮಟ್ಟಿಗೆ, 2019 ರ ಸೆಪ್ಟೆಂಬರ್‌ವರೆಗೆ, ಅದನ್ನು ಪಾವತಿಸಲಾಗಿತ್ತು ಎಂದು ಎದುರುದಾರರು ಹೇಳಿದ್ದಾರೆ ಮತ್ತು ಇದನ್ನು ಅರ್ಜಿದಾರರ ಪರ ವಕೀಲರೂ ವಿವಾದಿಸಿಲ್ಲ.ಆದುದರಿಂದ, 2019 ರ ಅಕ್ಟೋಬರ್ ತಿಂಗಳಿನಿಂದ ಈ ದಿನಾಂಕದವರೆಗೆ ಅರ್ಜಿದಾರನು ಜೀವನಾಧಾರ ಭತ್ಯೆಗೆ ಹಕ್ಕುಳ್ಳವರಾಗಿದ್ದಾರೆ.ಈ ನಿಟ್ಟಿನಲ್ಲಿ, ಅಧಿಕೃತ ಎದುರುದಾರರು ಅರ್ಜಿದಾರರಿಗೆ ಈ ದಿನಾಂಕದವರೆಗೆ ಜೀವನಭತ್ಯೆಯನ್ನು ಪಾವತಿಸಲು ಸಾಧ್ಯವಾಗುವಂತೆ, ಅವರು ಸಂಬಂಧಪಟ್ಟ ಎದರುದಾರರಿಗೆ ಪರ್ಯಾಯ ಬ್ಯಾಂಕ್ ಖಾತೆ ಸಂಖ್ಯೆಯನ್ನು ಒದಗಿಸುವುದು ಅಗತ್ಯ.

12. ಈ ಹಿನ್ನೆಲೆಯಲ್ಲಿ, ಪರಿಗಣನೆಗಾಗಿ ಇರುವ ಪ್ರಶ್ನೆಗಳು ಹೀಗಿವೆ:

( 6) ಜೀವನಾಧಾರ ಭತ್ಯೆಯ ಪಾವತಿಗೆ ಸಂಬಂಧಿಸಿದಂತೆ ಅಧಿಕೃತ ಎದುರುದಾರರಿಗೆ ನಿರ್ದೇಶಿಸಲು ಕೋರಿ ಅರ್ಜಿದಾರನು ಪ್ರಕರಣವನ್ನು ದಾಖಲಿಸಿದ್ದಾನೆಯೇ?ಅಥವಾ ಇಲ್ಲವೇ?

(ii) 02-02-2019 ರ ರಂದು ೦ ದು ಕೈಗೊಂಡ ಶಿಸ್ತು ವ್ಯವಹರಣೆಯ ಫಲಿತಾಂಶಕ್ಕೊಳಪಟ್ಟು, ಅರ್ಜಿದಾರರು ಮತ್ತೆ ಸೇವೆಗೆ ಸೇರಿಸಿಕೊಳ್ಳುವುದಕ್ಕಾಗಿ ಮೇಲ್ನೋಟದ ದಾವೆಯನ್ನು ಸಲ್ಲಿಸಿದ್ದಾನೆಯೇ?

13. ಜೀವನಾಧಾರ ಭತ್ಯೆಯನ್ನು ನೀಡುವುದರ ಉದ್ದೇಶವು ಉದ್ಯೋಗಿ/ಅಧಿಕಾರಿಯ ಬದುಕಿಗಾಗಿ/ಜೀವನೋಪಾಯಕ್ಕಾಗಿ ಆಗಿದೆ. ಅವರು ತಾತ್ಕಾಲಿಕ ಆಧಾರದ ಮೇಲೆ ಅಧಿಕಾರಿಯಾಗಿ ಮುಂದುವರೆಯುವುದನ್ನು ಅಮಾನತು ಮಾಡಿರುವುದರಿಂದ ಅದನ್ನು ಪಾವತಿಸಬೇಕಾಗಿದೆ. 'ಕೆಸಿಎಸ್ಆ'ನ 98 ನೇ ನಿಯಮವು ಜೀವನಾಧಾರ ಭತ್ಯೆಯ ಬಗ್ಗೆ ಪ್ರಸ್ತಾಪಿಸುತ್ತದೆ.ಅದನ್ನು ಈ ಕೆಳಗಿನಂತೆ ಓದಲಾಗಿದೆ:

98. (1) ಅಮಾನತಿನಲ್ಲಿ ಇರಿಸಲಾದ ಅಥವಾ ಹಾಗೆ ಅ ಇರಿಸಲಾಗಿದೆಯೆಂದು ಭಾವಿಸಲಾದ ಅಥವಾ ಅಮಾನತಿನಲ್ಲಿರುವುದನ್ನು ಮುಂದುವರೆಸಲಾದ ಒಬ್ಬ ಸರ್ಕಾರಿ ನೌಕರನು ಈ ಮುಂದಿನ ಪಾವತಿಗಳಿಗೆ ಅರ್ಹನಾಗಿರತಕ್ಕದ್ದು, ಅವುಗಳೆಂದರೆ:

(ಎ) ಒಬ್ಬ ಸರ್ಕಾರಿ ನೌಕರನು ಅರ್ಧ ವೇತನ ರಜೆಯಲ್ಲಿದ್ದರೆ, ಬ ಯಾವ ರಜಾ ವೇತನವನ್ನು ಪಡೆಯುತ್ತಿದ್ದನೋ ಆ ರಜಾ ವೇತನಕ್ಕೆ ಸಮನಾದ ಮೊತ್ತದ ಜೀವನಾಧಾರ ಭತ್ಯೆಯನ್ನು ಮತ್ತು ಅಂತಹ ರಜೆಯ ವೇತನದ ಆಧಾರದ ಮೇಲೆ ಸ್ವೀಕರಿಸಬಹುದಾದರೆ, ಹೆಚ್ಚುವರಿಯಾಗಿ, ತುಟ್ಟಿಭತ್ಯೆ, ಮತ್ತು

(ಬಿ) ಒಬ್ಬ ಸರ್ಕಾರಿ ನೌಕರನು ಅಂತಹ ಭತ್ಯೆಗಳನ್ನು ಪಡೆಯುವುದಕ್ಕಾಗಿ ವಿಧಿಸಿದ ಇತರ ಷರತ್ತುಗಳ ನೆರವೇರಿಕೆಗೆ ಒಳಪಟ್ಟು, ಅಮಾನತುಗೊಂಡ ದಿನಾಂಕದಂದು ಸ್ವೀಕರಿಸಿದ್ದ ವೇತನದ ಆಧಾರದ ಮೇಲೆ ಕಾಲಕಾಲಕ್ಕೆ ಸ್ವೀಕರಿಸಬಹುದಾದ ಮನೆಬಾಡಿಗೆ ಭತ್ಯೆ ಹಾಗೂ ನಗರ ಪರಿಹಾರ ಭತ್ಯೆ:

ಪರಂತು, ಅಮಾನತಿನ ಅವಧಿಯು ಆರು ತಿಂಗಳು ಮೀರಿದ್ದಲ್ಲಿ, ಅಮಾನತು ಆದೇಶವನ್ನು ಮಾಡಿದ ಅಥವಾ ಮಾಡಿದುದಾಗಿ ಭಾವಿಸಲಾದ ಪ್ರಾಧಿಕಾರವು, ಮೊದಲ ಆರು ತಿಂಗಳ ಅವಧಿಯ ತರುವಾಯದ ಯಾವುದೇ ಅವಧಿಗಾಗಿ ಜೀವನಾಧಾರ ಭತ್ಯೆಯ ಮೊತ್ತವನ್ನು ವ್ಯತ್ಯಾಸಗೊಳಿಸಲು ಸಕ್ಷಮವಾಗಿರತಕ್ಕದ್ದು,.

(i) ಸದರಿ ಪ್ರಾಧಿಕಾರದ ಅಭಿಪ್ರಾಯದಲ್ಲಿ, ಅಮಾನತು ಅವಧಿಯು, ಲಿಖಿತದಲ್ಲಿ ದಾಖಲಿಸಬೇಕೆ ೦ ಬ ಕಾರಣಗಳಿಗಾಗಿ ದೀರ್ಘ ಕಾಲದವರೆಗೆ ಇದ್ದರೆ, ಸರ್ಕಾರಿ ನೌಕರನಿಗೆ ನೇರವಾಗಿ ಹೇಳಲಾಗದಿದ್ದರೆ, ಮೊದಲ ಆರು ತಿಂಗಳ ಅವಧಿಯಲ್ಲಿ ಸ್ವೀಕಾರಾರ್ಹವಾದ ಜೀವನಾಧಾರಭತ್ಯೆಯ ಶೇಕಡಾ ಐವತ್ತರಷ್ಟನ್ನು ಮೀರದಂತೆ ಜೀವನಾಧಾರ ಭತ್ಯೆಯ ಮೊತ್ತವನ್ನು ಸೂಕ್ತವಾಗಿ ಹೆಚ್ಚಿಸಬಹುದು.

(ii) ಸದರಿ ಪ್ರಾಧಿಕಾರದ ಅಭಿಪ್ರಾಯದಲ್ಲಿ, ಅಮಾನತು ಅವಧಿಯು, ಲಿಖಿತದಲ್ಲಿ ದಾಖಲಿಸಬೇಕೆಂಬ ಕಾರಣಗಳಿಗಾಗಿ ದೀರ್ಘಕಾಲದವರೆಗೆ ಇದ್ದರೆ, ಸರ್ಕಾರಿ ನೌಕರನಿಗೆ ನೇರವಾಗಿ ಹೇಳಬಹುದಾಗಿದ್ದರೆ, ಮೊದಲ ಆರು ತಿಂಗಳ ಅವಧಿಯಲ್ಲಿ ಸ್ವೀಕಾರಾರ್ಹವಾದ ಜೀವನಾಧಾರ ಭತ್ಯೆಯ ಶೇಕಡಾ ಐವತ್ತರಷ್ಟನ್ನು ಮೀರದಂತೆ ಜೀವನಾಧಾರ ಭತ್ಯೆಯ ಮೊತ್ತವನ್ನು ಸೂಕ್ತವಾಗಿ ಇಳಿಸಬಹುದು.

(iii) ತುಟ್ಟಿ ಭತ್ಯೆಯ ಮೊತ್ತವು ಜೀವನಾಧಾರ ಭತ್ಯೆಯ ಮೊತ್ತದಲ್ಲಿ ಏರಿಕೆ ಅಥವಾ ಇಳಿಕೆಯ ಮೇಲೆ ಆಧರಿಸಿರುತ್ತದೆ.ಮೇಲ್ಕಂಡ ( 1) ಮತ್ತು(ii) ನೇ ಖಂಡಗಳ ಅಡಿಯಲ್ಲಿ ಸ್ವೀಕಾರಾರ್ಹವಾದ ಜೀವನಾಧಾರ ಭತ್ಯೆಯ ಮೊತ್ತದಲ್ಲಿ, ಸಂದರ್ಭಾನುಸಾರ ಏರಿಕೆ ಅಥವಾ ಇಳಿಕೆಯನ್ನು ಆಧರಿಸಿರತಕ್ಕದ್ದು.

[ಟಿಪ್ಪಣಿ.-ಅಮಾನತುಗೊಳಿಸಲಾದ ಸರ್ಕಾರಿ ನೌಕರರ ಪ್ರಧಾನ ಕಛೇರಿಯನ್ನು ಸಾರ್ವಜನಿಕ ಹಿತಾಸಕ್ತಿಯಿಂದ ಹಕ್ಕನ್ನು ಬದಲಾಯಿಸುವ ಮೂಲಕ ಬದಲಾಯಿಸಿದರೆ, ಹೊಸ ಹುದ್ದೆಯ ಸ್ಥಳದಲ್ಲಿ, ಸ್ವೀಕಾರಾರ್ಹ ಮನೆ

ಬಾಡಿಗೆ ಭತ್ಯೆ ಮತ್ತು ನಗರ ಪರಿಹಾರ ಭತ್ಯೆಯನ್ನು ಸರ್ಕಾರಿ ನೌಕರನಿಗೆ ಪಾವತಿಸತಕ್ಕದ್ದು. ](ಒತ್ತು ನೀಡಲಾಗಿದೆ)

(2) ಒಬ್ಬ ಸರ್ಕಾರಿ ನೌಕರನು ಯಾವುದೇ ಇತರ ನೌಕರಿ, ವ್ಯವಹಾರ, ಉದ್ಯೋಗ, ಅಥವಾ ವೃತ್ತಿಯಲ್ಲಿ ತೊಡಗಿಸಿಕೊಂಡಿಲ್ಲ ಎಂಬ ಪ್ರಮಾಣಪತ್ರವನ್ನು ನೀಡಿದ ಹೊರತು ( 1) ನೇ ಉಪನಿಯಮದ ಅಡಿಯಲ್ಲಿ ಯಾವುದೇ ಪಾವತಿಯನ್ನು ಮಾಡತಕ್ಕದ್ದಲ್ಲ.

ಪರಂತು, ಒಬ್ಬ ಸರ್ಕಾರಿ ನೌಕರನನ್ನು ಸೇವೆಯಿಂದ ವಜಾ ಮಾಡಿದ ತೆಗೆದುಹಾಕಿದ ಅಥವಾ ಕಡ್ಡಾಯ ನಿವೃತ್ತಿಗೊಳಿಸಿದ ಸಂದರ್ಭದಲ್ಲಿ, ಅವನನ್ನು ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 ರ 10 ನೇ ನಿಯಮದ ( 3) ನೇ ಉಪನಿಯಮದ ಅಥವಾ ( 4) ನೇ ಉಪನಿಯಮದ ಅಡಿಯಲ್ಲಿ, ಅಂತಹ ವಜಾಗೊಳಿಸಿದ ಅಥವಾ ತೆಗೆದುಹಾಕಿದ ಅಥ ವಾ ಕಡ್ಯಾಂ ನಿವೃತ್ತಿಯ ದಿ ನಾ ಂ ಕ ದಿ ಂ ದ ಅಮಾನತುಗೊಳಿಸಲಾಗಿದೆ ಅಥವಾ ಅಮಾನತಿನಲ್ಲಿರುವುದು ಮು ಂ ದುವರೆಯುತ್ತದೆ ಎಂದು ಭಾವಿಸಲಾಗಿದೆ.ಅವನನ್ನು ಅಮಾನತುಗೊಳಿಸಲಾಗಿದೆ ಅಥವಾ ಅಮಾನತಿನಲ್ಲಿರುವುದು ಮುಂದುವರೆಯುತ್ತದೆ ಎಂದು ಭಾವಿಸಲಾದ ಅವಧಿಯಲ್ಲಿ, ಯಾವುದೇ ಅವಧಿಗೆ ಅಥವಾ ಅವಧಿಗಳಿಗೆ ಅ ಂ ತಹ ಪ್ರಮಾಣಪತ್ರವನ್ನು ಹಾಜರುಪಡಿಸಲು ವಿಫಲವಾಗಿದ್ದು, ಅಂತಹ ಅವಧಿ ಅಥವಾ ಸಂದರ್ಭಾನುಸಾರ, ಇತರ ಅವಧಿಗಳಲ್ಲಿ ಅವನ ಗಳಿಕೆಗೆ ಸಮನಾದ ಮೊತ್ತದ ಜೀವನಾಧಾರ ಭತ್ಯೆ ಮತ್ತು ಇತರ ಭತ್ಯೆಗಳಿಗೆ ಹಕ್ಕುಳ್ಳವನಾಗಿರತಕ್ಕದ್ದು.ಅವನಿಗೆ ಬೇರೆ ರೀತಿಯಲ್ಲಿ ಸ್ವೀಕಾರಾರ್ಹವಾದಂಥ ಜೀವನಾಧಾರ ಭತ್ಯೆ ಮತ್ತು ಸ ಂ ದರ್ಭಾನುಸಾರ, ಇತರ ಭತ್ಯೆಗಳ ಮೊತ್ತ ಕ್ಕಿಂತ ಕಡಿಮೆಯಾಗುತ್ತದೆ.ಆದರೆ, ಅವನಿಗೆ ಸ್ವೀಕಾರಾರ್ಹವಾದ ಜೀವನಾಧಾರ ಭತ್ಯೆ ಮತ್ತು ಇತರ ಭತ್ಯೆಗಳು ಅವನು ಗಳಿಸುವ ಮೊತ್ತಕ್ಕೆ ಸಮನಾಗಿ ಅಥವಾ ಅದಕ್ಕಿಂತ ಕಡಿಮೆಯಾಗಿದ್ದಾಗ, ಈ ಪರಂತುಕದಲ್ಲಿನ ಯಾವುದೂ ಅವನಿಗೆ ಅನ್ವಯಿಸುವುದಿಲ್ಲ. ]

14. ಖಜಾನೆಯ ಖಾತೆ ಮುಖಾಂತರ 2019 ರ ಸೆಪ್ಟೆಂಬರ್‌ವರೆಗೆ ಕಾಲಕಾಲಕ್ಕೆ ಜೀವನಾಧಾರ ಭತ್ಯೆಯನ್ನು ಪಾವತಿಸಲಾಗಿದೆ ಎಂದು ಅಧಿಕೃತ ಎದುರುದಾರರು ಅಭಿಪ್ರಾಯಪಟ್ಟಿದ್ದಾರೆ.ಅದೇ ಸಮಯದಲ್ಲಿ, ಅರ್ಜಿದಾರನ ಬ್ಯಾಂಕ್ ಖಾತೆಯನ್ನು ಪ್ರಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆಂದು ಹೇಳಲಾಗಿದೆ ಎಂದು ಅಧಿಕೃತ ಎದುರುದಾರರ ಪರವಾಗಿ ನಿವೇದಿಸಲಾಗಿತ್ತು.ಹೀಗಾಗಿ, ಅರ್ಜಿದಾರರು ಬ್ಯಾಂಕಿನಿಂದ ಜೀವನಾಧಾರ ಭತ್ಯೆಯನ್ನು ಪಡೆದುಕೊಳ್ಳಲು ಅಥವಾ ಯಾವುದೇ ಬ್ಯಾಂಕ್ ವ್ಯವಹಾರ ಮಾಡುವುದನ್ನು ನಿರ್ಬಂಧಿಸಲಾಗಿದೆ.ಕೆಲವು ಆರೋಪಿತ ಆಪಾದನೆಗಳಿಗೆ ಸಂಬಂಧಿಸಿದಂತೆ ಪ್ರಾಧಿಕಾರಿಗಳು ವಶಪಡಿಸಿಕೊಂಡಿದ್ದಾರೆ ಎಂಬ ಸಂಗತಿಯು ಅಧಿಕೃತ ಎದುರುದಾರರಿಗೆ ಗೊತ್ತಿದ್ದರೆ, ಜೀವನಾಧಾರ ಭತ್ಯೆಯನ್ನು ಸಂದಾಯ ಮಾಡುವ ಉದ್ದೇಶಕ್ಕಾಗಿ ಪರ್ಯಾಯ ಬ್ಯಾಂಕ್ ಖಾತೆಯನ್ನು ಒದಗಿಸುವಂತೆ ಅರ್ಜಿದಾರನಿಂದ ಅಗತ್ಯ ಮಾಹಿತಿಯನ್ನು ಪಡೆಯುವುದು ಅಧಿಕೃತ ಎದುರುದಾರರ ಬದ್ಧ ಕರ್ತವ್ಯವಾಗಿತ್ತು.ದಿನಾಂಕ: 12-06-2020ರಂದು-ವಿಷಯವನ್ನು ಆಲಿಸಿದ ದಿನಾಂಕದಂದು, ಅಧಿಕೃತ ಎದುರುದಾರರ ಕೆಲ ಅಧಿಕಾರಿಗಳು ಹಾಜರಿದ್ದರು ಮತ್ತು ಅವರ ಸೂಚನೆಯ ಮೇರೆಗೆ, ಮಾನ್ಯ ರಾಜ್ಯ ವಕೀಲರು ಅರ್ಜಿದಾರನ ಪರ್ಯಾಯ ಬ್ಯಾಂಕ್ ಖಾತೆ ಸಂಖ್ಯೆಯನ್ನು ಕೇಳಿದರು.ಹೀಗಾಗಿ, ಅರ್ಜಿದಾರರ ತಪ್ಪೇ ಇಲ್ಲದೆ, 2019 ರ ಅಕ್ಟೋಬರ್‌ನಿಂದ ಅವರಿಗೆ ಜೀವನಾಧಾರ ಭತ್ಯೆಯನ್ನು ನಿರಾಕರಿಸಲಾಗಿದೆ.ಆದುದರಿಂದ, ಚಾಲ್ತಿಯಲ್ಲಿಲ್ಲದ ಖಾತೆಯಲ್ಲಿ ಜೀವನಾಧಾರ ಭತ್ಯೆಯ ಸಂದಾಯವನ್ನು ತೆಗೆಯುವುದಕ್ಕೆ ಅಗತ್ಯ

ವ್ಯವಸ್ಥೆಯನ್ನು ಮಾಡಬೇಕೆಂದು ಮತ್ತು ಪರ್ಯಾಯ ಖಾತೆಸಂಖ್ಯೆಯನ್ನು ಪಡೆಯುವಾಗ ಅಥವಾ ಪರ್ಯಾಯವಾಗಿ, ಈ ದಿನದವರೆಗಿನ ಜೀವನಾಧಾರ ಭತ್ಯೆಯನ್ನು ಬಾಕಿ ಹಣವನ್ನು ಲೆಕ್ಕಮಾಡಿ, ಅರ್ಜಿದಾರನಿಗೆ ಪಾವತಿಸುವಂತೆ ಮತ್ತು ಅರ್ಜಿದಾರನ ವಶಪಡಿಸಿಕೊಳ್ಳಲಾದ ಖಾತೆಯಲ್ಲಿ ಠೇವಣಿ ಮಾಡಲಾಗಿದೆಯೆಂದು/ಪಾವತಿಸಲಾಗಿದೆಯೆಂದು ಹೇಳಲಾದ ಮೊತ್ತ ಏನಿದೆಯೋ ಅದನ್ನು ಪಾವತಿಸಬೇಕೆಂದು, ಅದನ್ನು ಮುಂದಿನ ದಿನಗಳಲ್ಲಿ ಹೊಂದಾಣಿಕೆ ಮಾಡಬಹುದೆಂದು ಅಧಿಕೃತ ಎದುರುದಾರರಿಗೆ ಈ ಮೂಲಕ ನಿರ್ದೇಶಿಸಲಾಗಿದೆ.

15. ಮಧ್ಯಪ್ರದೇಶ ರಾಜ್ಯ ಮತ್ತು ಇತರರು -ವಿರುದ್ಧ ಶಂಕರ್ಲಾಲ್ (2008) 2 ಎಸ್ಸಿಸಿ 55 ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು, " ಅಮಾನತುಗೊಂಡಿರುವ ಉದ್ಯೋಗಿಗೆ ನಿಯಮಾನುಸಾರ ಜೀವನಾಧಾರ ಭತ್ಯೆ ಪಾವತಿಸುವುದು ಸಹಾಯವಾಗಲಾರದು.ಅದು ಒಂದು ಹಕ್ಕು. ಒಬ್ಬ ನೌಕರನು ಜೀವನಾಧಾರ ಭತ್ಯೆಯನ್ನು ಪಡೆಯಲು ಹಕ್ಕುಳ್ಳವನಾಗಿದ್ದಾನೆ " ಎಂದು ಅಭಿಪ್ರಾಯಪಟ್ಟಿದೆ."

16. ಎ.ಕೆ. ಬಿಂದಲ್ ಮತ್ತು ಇನ್ನೊಬ್ಬರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು2003 ( 5) ಎಸ್ಸಿಸಿ 163 ಮೊಕದ್ದಮೆಯಲ್ಲೂ ಈ ಕೆಳಗಿನಂತೆ ತೀರ್ಮಾನಿಸಿದೆ:

" ಈ ಪ್ರಕರಣದಲ್ಲಿ ಪ್ರತಿಪಾದಿಸಲಾಗಿರುವ ಜೀವನಹಕ್ಕು ಎಂದರೆ, ಬದುಕುಳಿಯುವಿಕೆ ಅಥವಾ ಪ್ರಾಣಿಗಳ ಅಸ್ತಿತ್ವಕ್ಕಿಂತ ಹೆಚ್ಚಿನದಾಗಿದೆ.ಇದು ಮಾನವ ಘನತೆಯಿಂದ ಬದುಕುವ ಹಕ್ಕನ್ನು ಒಳಗೊಂಡಿರುತ್ತದೆ.ಅಮಾನತುಗೊಂಡಿರುವ ಒಬ್ಬ ಉದ್ಯೋಗಿಗೆ ಅತಿ ಕಡಿಮೆ ಜೀವನಾಧಾರ ಭತ್ಯೆಯನ್ನು ಪಾವತಿಸುವುದು ಅವನ ಜೀವನೋಪಾಯಕ್ಕೆ ಏನೇನೂ ಸಾಕಾಗುವುದಿಲ್ಲ.ಅದನ್ನು ಸಂವಿಧಾನದ 21 ನೇ ಅನುಚ್ಛೇದದ ಉಲ್ಲಂಘನೆಯೆಂದು ಅಭಿಪ್ರಾಯಪಡಲಾಗಿದೆ."

17. ರಿಜಿಸ್ಟ್ರಾರ್ ಮತ್ತು ಇತರರು -ವಿರುದ್ಧ-ಎಂ.ಎಲಾಂಗೊ 2020 ಎಸ್ಸಿಸಿ ಆನ್ಲೈನ್ ಮದ್ರಾಸ್ 384 ಮೊಕದ್ದಮೆಯಲ್ಲಿ ಮದ್ರಾಸ್ ಉಚ್ಚ ನ್ಯಾಯಾಲಯವು ' ಜೀವಿಸಲು ' ಎಂದರೆ, ಬದುಕಲು ವಿಶೇಷವಾಗಿ ಸೀಮಿತ ಸಂಪನ್ಮೂಲಗಳು ಮತ್ತು ಹಣದೊಂದಿಗೆ ಜೀವನ ನಿರ್ವಹಣೆ ಮಾಡಿಕೊಳ್ಳುವುದು ಎಂದರ್ಥ, ಅಂತಹ ಜೀವನಮಟ್ಟವನ್ನು ಜೀವನಾಧಾರ ಎಂದು ಕರೆಯಲಾಗುತ್ತದೆ.ಅದು ಒಬ್ಬ ವ್ಯಕ್ತಿಯು ಮೂಲಭೂತ ಕನಿಷ್ಟ ಅಗತ್ಯತೆಗಳೊಂದಿಗೆ ಜೀವನವನ್ನು ಉಳಿಸಿಕೊಳ್ಳಲು ಸಾಕಾಗುವಷ್ಟು ಸಂಪನ್ಮೂಲಗಳನ್ನು ಹೊಂದಿದ್ದಾರೆ ಎಂಬ ಅಂಶವನ್ನು ಸೂಚಿಸುತ್ತದೆ.ಇದು ಸಂಬಳ ಪಡೆಯುವ ಉದ್ಯೋಗಿಗೆ ಜೀವನೋಪಾಯದ ಅಲ್ಪ ಸಂಪನ್ಮೂಲಗಳೊಂದಿಗೆ ಅಸ್ತಿತ್ವ ಅಥವಾ ಮುಂದುವರಿಕೆಯ ಸಾಧನೋಪಾಯಗಳನ್ನು ಜೀವನಾಧಾರ ಭತ್ಯೆ ಎಂದು ಕರೆಯಲಾಗಿದ್ದು, ಇದು ಸೇವೆಯಿಂದ ದೂರವಿಟ್ಟಾಗ ತಕ್ಷಣದ ಜೀವನವೆಚ್ಚಗಳನ್ನು ಪೂರೈಸುವ ಮುಂಗಡ ಪಾವತಿಯಾಗಿದೆ.ಆದುದರಿಂದ, ಇದು, ಸೀಮಿತ ಅಗತ್ಯತೆಗಳನ್ನು ಒದಗಿಸಲು ಸಾಕಾಗುವ ಆದಾಯವಾಗಿದೆ ಮತ್ತು ಅನಿವಾರ್ಯ ಸಂಕಷ್ಟಕ್ಕೆ ಒಳಗಾಗುವಾಗ ವಾಸ್ತವವಾಗಿ ಅಸ್ತಿತ್ವದಲ್ಲಿರುವ ಬೆಂಬಲದ ಸಮರ್ಪಕತೆಯಾಗಿದೆ.ಈ ಪರಿಕಲ್ಪನೆಯು ಕನಿಷ್ಟ ಆರ್ಥಿಕಮಟ್ಟದಲ್ಲಿ ಕನಿಷ್ಟ ಜೀವನಮಟ್ಟವನ್ನು ಕಾಪಾಡಿಕೊಳ್ಳುವುದಾಗಿದೆ.

18. ಹೀಗಾಗಿ, ಜೀವನಾಧಾರ ಭತ್ಯೆಯ ಬಾಕಿ ಹಣ ಪಾವತಿಗಾಗಿ ನಿರ್ದೇಶಿಸಲು ಕೋರಿ ಅರ್ಜಿದಾರರು ದಾವೆ ಸಲ್ಲಿಸಿದ್ದಾರೆ.ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ನಾಲ್ಕು ವಾರಗಳ ಅವಧಿಯೊಳಗಾಗಿ ಜೀವನಾಧಾರ

ಭತ್ಯೆಯ ಬಾಕಿ ಹಣ ಪಾವತಿಸುವಂತೆ ಅಧಿಕೃತ ಎದುರುದಾರರಿಗೆ/ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ನಿರ್ದೇಶಿಸಲಾಗಿದೆ.ಈ ತನ್ಮಧ್ಯೆ ಅರ್ಜಿದಾರರಿಗೆ ಪರ್ಯಾಯ ಬ್ಯಾಂಕ್ ಖಾತೆಯನ್ನು ಒದಗಿಸಲು ನಿರ್ದೇಶಿಸಲಾಗಿದೆ.

19.ದಿನಾಂಕ: 27.12.2018 ರ ಅಮಾನತು ಆದೇಶಕ್ಕೆ ಸಂಬಂಧಿಸಿದಂತೆ, ಅರ್ಜಿದಾರನು ಹುದ್ದೆಯ ಮರುಸ್ಥಾಪನೆಗೆ ಹಕ್ಕುಳ್ಳವನಾಗಿದ್ದಾನೆಯೇ?ಎಂಬ ಪ್ರಶ್ನೆಗೆ ಬಂದಾಗ, ಮೇಲ್ನೋಟಕ್ಕೆ ಅರ್ಜಿದಾರನು, ರದ್ದಾಗುವಷ್ಟರಮಟ್ಟಿಗೆ, ಅಮಾನತು ಆದೇಶಕ್ಕೆ ಹಸ್ತಕ್ಷೇಪ ಮಾಡಲು ಸಾಧ್ಯವಾಗುವಂತೆ ದಾವೆಯನ್ನು ಹೂಡಿಲ್ಲ.ಅದೇ ಸಮಯದಲ್ಲಿ, ಅಮಾನತು ಆದೇಶವು ತಾತ್ಕಾಲಿಕ ಕ್ರಮವಷ್ಟೇ ಆಗಿದೆ. ಅಮಾನತು ಎಂಬುದನ್ನು, ಒಬ್ಬರ ಹುದ್ದೆ ಅಥವಾ ಸ್ಥಾನದಿಂದ ಅವರನ್ನು ತಾತ್ಕಾಲಿಕವಾಗಿ ತಪ್ಪಿಸುವುದು ಎಂದು ಪರಿಭಾಷಿಸಲಾಗಿದೆ.ಉದ್ಯೋಗದಾತ ಮತ್ತು ಉದ್ಯೋಗಿಯ ನಡುವಿನ ಯಜಮಾನ ಮತ್ತು ನೌಕರ ಸಂಬಂಧವನ್ನು ಅಮಾನತು ಮುಕ್ತಾಯಗೊಳಿಸುವುದಿಲ್ಲ.ಅದು ಉದ್ಯೋಗಿಯ ವಿರುದ್ಧದ ಕೆಲವು ಇಲಾಖಾ/ಕೌಟುಂಬಿಕ/ಕ್ರಿಮಿನಲ್ ವಿಚಾರಣೆಗಳ ಇತ್ಯರ್ಥದ ಅವಧಿಯಲ್ಲಿ, ಉದ್ಯೋಗಿಯನ್ನು ಕೆಲಸದ ವಾತಾವರಣದಿಂದ ಸುಮ್ಮನೆ ದೂರವಿಡುತ್ತದೆ.ಒಬ್ಬ ಬ ಉದ್ಯೋಗಿಯನ್ನು ಅಮಾನತಿನಲ್ಲಿಡುವುದರ ಆಶಯ ಮತ್ತು ಉದ್ದೇಶವು, ಅವನು ವಿಚಾರಣೆಯ ಅಥವಾ ಯಾವುದೇ ರೀತಿಯಲ್ಲಿ ದಸ್ತಾವೇಜೀಯ ಅಥವಾ ಮೌಖಿಕ ಸಾಕ್ಷ್ಯವನ್ನು ಹಾಳುಮಾಡುವಂತಹ ಸ್ಥಾನದಿಂದ ದೂರವಿಡುವುದಾಗಿದೆ ಅಥವಾ, ಅವನ ವಿರುದ್ಧದ ಆರೋಪಗಳ ಸ್ವರೂಪವನ್ನು ಪರಿಗಣಿಸಿ, ಅವನ/ಅವಳ ಹುದ್ದೆಯ ಅಧಿಕಾರವನ್ನು ಮುಂದುವರೆಸುವುದು ಅಸುರಕ್ಷಿತವೆಂದು ಭಾವಿಸಲಾಗಿದೆ.ತಪ್ಪಿತಸ್ಥ, ಉದ್ಯೋಗಿಯನ್ನು ಅಮಾನತು ಮಾಡಿದಾಗ, ಅವನು ಇಲಾಖೆಯ ನಡಾವಳಿಗಳನ್ನು ಸಮಂಜಸವಾದ ಶ್ರದ್ಧೆಯಿಂದ ಮತ್ತು ಸಮಂಜಸವಾದ ಕಾಲಾವಧಿಯೊಳಗೆ ಮುಕ್ತಾಯಗೊಳಿಸಬೇಕು ಎಂಬುದನ್ನು ನಿರೂಪಿಸಲು ಹಕ್ಕುಳ್ಳವನಾಗಿದ್ದಾನೆ ಎಂಬುದು ಸ್ವಾಭಾವಿಕ ನ್ಯಾಯದ ಸ್ಪಷ್ಟ ತತ್ವವಾಗಿದೆ.ಅಂತಹ ತತ್ವವನ್ನು ಗುರುತಿಸದಿದ್ದರೆ, ಅದು ಕಾರ್ಯನಿರ್ವಾಹಕ ಅಧಿಕಾರಿಗೆ ತನ್ನ ಉದ್ಯೋಗಿ/ಅಧಿಕಾರಿಯನ್ನು ಅನಿರ್ದಿಷ್ಟ ಕಾಲಾವಧಿಗೆ ಅಸಮರ್ಥತೆ ಮತ್ತು ಅಪನಂಬಿಕೆಯಲ್ಲಿ ಇರಿಸುವ ಸಂಪೂರ್ಣ ನಿರಂಕುಶ ಮತ್ತು ಅನಿರ್ಬಂಧಿತ ಅಧಿಕಾರವನ್ನು ನಿಹಿತಗೊಳಿಸಲಾಗಿದೆ ಎಂದು ಸೂಚಿಸುತ್ತದೆ.ಅಮಾನತಿನ ಸಂಪೂರ್ಣ ಅವಧಿ ಎಂದರೆ, ತನಿಖೆ ಮತ್ತು ಶಿಸ್ತು ವ್ಯವಹರಣೆ ಇವೆರಡಕ್ಕೂ ಸಂಬಂಧಿಸಿದಂತೆ, ಸಾಧಾರಣವಾಗಿ ಆರು ತಿಂಗಳು ಮೀರಬಾರದು.ಅಪರೂಪದ ಸಂದರ್ಭಗಳಲ್ಲಿ, ಆರು ತಿಂಗಳ ಸದರಿ ಕಾಲಾವಧಿಯನ್ನು ಅನುಸರಿಸಲು ಸಾಧ್ಯವಾಗದಿದ್ದಲ್ಲಿ, ಶಿಸ್ತು ಪ್ರಾಧಿಕಾರ ಅಥವಾ ಸಕ್ಷಮ ಪ್ರಾಧಿಕಾರವು ಅಮಾನತನ್ನು ಮುಂದುವರೆಸಲು ಕಾರಣಗಳನ್ನು ದಾಖಲಿಸುವ ಮೂಲಕ ಅಮಾನತನ್ನು ಪುನರ್ ಪರಿಶೀಲನೆ ಮಾಡಲು ಕ್ರಮ ಕೈಗೊಳ್ಳಬೇಕು.ನಿಯತಕಾಲಿಕವಾಗಿ ಅಮಾನತನ್ನು ಪರಿಶೀಲಿಸುವಷ್ಟರಮಟ್ಟಿಗೆ ಸರ್ಕಾರವು 3 ತಿಂಗಳಿಗೊಮ್ಮೆ ಅಥವಾ ಆರು ತಿಂಗಳಿಗೊಮ್ಮೆ ಅಮಾನತಿನ ಪರಿಶೀಲನೆಯಂತೆ, ಕಾಲಕಾಲಕ್ಕೆ ಮತ್ತು ಆರೋಪ ಪಟ್ಟಿ/ಚಾರ್ಜ್ ಮೆಮೊ ನೀಡದೆ ದೀರ್ಘಕಾಲ ಅಮಾನತುಗೊಳಿಸುವಂತಹ ಮಾರ್ಗಸೂಚಿಗಳನ್ನು ನೀಡಿದೆ.ಅಮಾನತುಗೊಂಡ ನೌಕರನ ವಿರುದ್ಧ ಯಾವುದೇ ಕ್ರಮಗಳನ್ನು ಪ್ರಾರಂಭಿಸಲಾಗಿಲ್ಲ ಎಂಬ ಕಾರಣಕ್ಕಾಗಿ ಅನೇಕ ಪ್ರಕರಣಗಳಲ್ಲಿ ನ್ಯಾಯಾಲಯಗಳು ಮಧ್ಯೆ ಪ್ರವೇಶಿಸಿವೆ ಹಾಗೂ ಅಮಾನತು ಆದೇಶವನ್ನು ರದ್ದುಪಡಿಸಿವೆ. ಇದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ನೌಕರನನ್ನು ಧೀರ್ಘಕಾಲದವರೆಗೆ ಅಮಾನತುಗೊಳಿಸುವುದು ಕಾನೂನುಬದ್ಧವ ವಾಗಿ ಸಮರ್ಥನೀಯವಲ್ಲ.ಅದರಲ್ಲೂ ನಿರ್ದಿಷ್ಟವಾಗಿ, ನೌಕರನು ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಅಥವಾ ದಾಖಲೆಗಳನ್ನು ಹಾಳುಮಾಡುವ

ಸ್ಥಿತಿಯಲ್ಲಿರುವನೆಂಬ ಆತಂಕ ಇಲ್ಲದಿರುವಲ್ಲಿ ಅದು ಸಮರ್ಥನೀಯವಲ್ಲ.ಸಂಬಂಧಪಟ್ಟ ಅಧಿಕಾರಿಯು ದಾಖಲೆಗಳನ್ನು ಹಾಳುಮಾಡುವ ಅಥವಾ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇಲ್ಲದಿದ್ದಾಗ, ಅಮಾನತನ್ನು ಮುಂದುವರೆಸುವುದು ಅನಗತ್ಯವಾಗಬಹುದು.ಪ್ರಸ್ತುತ ಪ್ರಕರಣದಲ್ಲಿ ಆರೋಪಪಟ್ಟಿಯನ್ನು ಅಮಾನತು ಆದೇಶದ ದಿನಾಂಕದಿಂದ ಮೂರು ತಿಂಗಳುಗಳೊಳಗೆ ನೀಡಲಾಗಿದೆ.ಆದಾಗ್ಯೂ, ಆರೋಪಗಳನ್ನು ರೂಪಿಸಿದ ದಿನಾಂಕದಿಂದ ಏಳು ತಿಂಗಳ ನಂತರವೂ ಶಿಸ್ತು ವ್ಯವಹರಣೆಗಳಲ್ಲಿ ಯಾವುದೇ ಪ್ರಗತಿಯಾಗಿಲ್ಲ.ಕೋರಲಾದ ದಾಖಲೆಗಳನ್ನು ಅರ್ಜಿದಾರರಿಗೆ ನ್ಯಾಯಿಕ ಆದೇಶದ ಮೂಲಕ ಲಭ್ಯವಾಗುವಂತೆ ಮಾಡಲಾಯಿತು.ಆದುದರಿಂದ, ಎದುರುದಾರರು ಶಿಸ್ತುಕ್ರಮವನ್ನು ಬಾಕಿ ಇರಿಸಿ, ಅಮಾನತು ಆದೇಶವನ್ನು ರದ್ದು ಪಡಿಸಬೇಕು.ಹೀಗಾಗಿ, ಕಾಲಕಾಲಕ್ಕೆ ಡಿಪಿಎಆರ್ ಹೊರಡಿಸಿದ ಆದೇಶಗಳೊಂದಿಗೆ ಓದಲಾದ ಮತ್ತು ಅಜಯ್ ಕುಮಾರ್ ಚೌಧರಿ (ಮೇಲೆ ಹೇಳಲಾದ) ಮೊಕದ್ದಮೆಯಲ್ಲಿ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ನಿಯಮದೊಂದಿಗೆ ಓದಲಾದ ಕೆಸಿಎಸ್ಆರ್ (ಮೇಲೆ ಹೇಳಿದ) 98 ನೇ ನಿಯಮವನ್ನು ಅನುಸರಿಸದೆ ಎದುರುದಾರರು ಸಂಪೂರ್ಣವಾಗಿ ನಿಷ್ಕ್ರಿಯರಾಗಿದ್ದಾರೆ.ದಿನಾಂಕ 27-12-2018 ರ ಅಮಾನತು ಆದೇಶದ ಮುಂದುವರಿಕೆಯು ಆಧಾರ ರಹಿತವಾದುದಾಗಿದೆ.ಅಮಾನತಿನ ಪುನರ್ಪರಿಶೀಲನೆಯ ಪ್ರಕ್ರಿಯೆಯು ದಿನಾಂಕ 13-12-2019 ರಂದು ಪ್ರಾರಂಭವಾಯಿತು ಮತ್ತು ಅದು ಈ ದಿನದವರೆಗೂ ಅಂತಿಮಗೊಂಡಿಲ್ಲ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ.ಅದನ್ನೇ ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅಮಾನತಿನ ಪುನರ್ ಪರಿಶೀಲನೆಯನ್ನು 1 ವರ್ಷ 6 ತಿಂಗಳು ಕಳೆದ ನಂತರವೂ ಸಹ ಕೈಗೆತ್ತಿಕೊಳ್ಳಲಿಲ್ಲ.

20. ಅಮಾನತ್ತಿನ ಮುಂದುವರಿಕೆಗೆ ಅಥವಾ ಅದೇ ಸ್ಥಾನದಲ್ಲಿ ಮರುಸ್ಥಾಪಿಸುವುದಕ್ಕೆ ಸಂಬಂಧಿಸಿದಂತೆ, ಅನೇಕ ಸನ್ನಿವೇಶಗಳನ್ನು ನಿಭಾಯಿಸುವ ದೃಷ್ಟಿಯಿಂದ, ಡಿಪಿಎಆರ್/ರಾಜ್ಯ ಸರ್ಕಾರವು ಕಾಲಕಾಲಕ್ಕೆ ಸುತ್ತೋಲೆಗಳನ್ನು ಹೊರಡಿಸಿದೆ.ಡಿಪಿಎಆರ್ 13 ಎಸ್ಡಿಇ 85ದಿನಾಂಕ: 3 ನೇ ಜುಲೈ, 1985 ರ ಅಂಥ ಒಂದು ಸುತ್ತೋಲೆಯನ್ನು ಈ ಕೆಳಗಿನಂತೆ ಓದಲಾಗಿದೆ:

ಕರ್ನಾಟಕ ಸರ್ಕಾರ

ಸಂ. ಡಿಪಿಎಆರ್ 13 ಎಸ್ಡಿಇ 85 ಕರ್ನಾಟಕ ಸರ್ಕಾರದ ಸಚಿವಾಲಯ,

ವಿಧಾನ ಸೌಧ,

ಬೆಂಗಳೂರು, ದಿನಾಂಕ 3 ನೇ ಜುಲೈ, 1985

ಅಧಿಕೃತ ಜ್ಞಾಪನಪತ್ರ

ವಿಷಯ:ಸರ್ಕಾರಿ ನೌಕರರ ಅಮಾನತು ಮತ್ತು ಅವರ ಹುದ್ದೆಯಲ್ಲಿ ಪುನಃಸ್ಥಾಪನೆ.

ಉಲ್ಲೇಖ:1) ಅಧಿಕೃತ ಜ್ಞಾಪನಪತ್ರ ಸಂಖ್ಯೆ.ಡಿಪಿಎಆರ್ 12 ಎಸ್ಡಿಇ 83ದಿನಾಂಕ: 24-04-1984.

2) ಅಧಿಕೃತ ಜ್ಞಾಪನಪತ್ರ ಸಂಖ್ಯೆ.ಡಿಪಿಎಆರ್ 12 ಎಸ್ಡಿಇ 83ದಿನಾಂಕ: 04-03-1985.

ಅಧಿಕೃತ ಜ್ಞಾಪನಪತ್ರ ಸಂಖ್ಯೆ.ಡಿಪಿಎಆರ್ 12 ಎಸ್ಡಿಇ 83 ದಿನಾಂಕ 21 ನೇ ಏಪ್ರಿಲ್ 1984 ರಲ್ಲಿ ತನಿಖೆ/ವಿಚಾರಣೆಗೆ ಬಾಕಿ ಇರಿಸಿ, ಅಮಾನತನ್ನು ಮುಂದುವರಿಸಬೇಕಾದ ಅವಧಿಗೆ ಸಂಬಂಧಿಸಿದ ಕಂಡಿಕೆಯನ್ನು ಈ ಮುಂದಿನಂತೆ ಪ್ರತ್ಯಾಯೋಜಿಸತಕ್ಕದ್ದು:

ಅಮಾನತಿನ ಅವಧಿಯನ್ನು ಈ ಕೆಳಗೆ ಸೂಚಿಸಿರುವಂತೆ ಸೀಮಿತಗೊಳಿಸತಕ್ಕದ್ದು:

( ಎ) ಒಬ್ಬ ಸರ್ಕಾರಿ ನೌಕರನನ್ನು ಅವನ ವಿರುದ್ಧದ ಆರೋಪಗಳ ಬಗ್ಗೆ ತನಿಖೆ ಪ್ರಾರಂಭವಾಗುವ ಮೊದಲು ಅಮಾನತು ಮಾಡಿದರೆ, ಅಮಾನತು ದಿನಾಂಕದಿಂದ 6 ತಿಂಗಳೊಳಗೆ ತನಿಖೆ ಪೂರ್ಣಗೊಳ್ಳದಿದ್ದರೆ, ಆತನನ್ನು ಮತ್ತೆ ಸೇವೆಯಲ್ಲಿ ಸೇರಿಸಿಕೊಳ್ಳಬೇಕು.ಅಂತಹ ಸಂದರ್ಭದಲ್ಲಿ, ತನಿಖೆಯ ಕೊನೆಯಲ್ಲಿ ಮೇಲ್ನೋಟಕ್ಕೆ ಪ್ರಕರಣ ಸಾಬೀತಾದರೆ, ವಿಚಾರಣೆ/ಅಧಿವಿಚಾರಣೆಯನ್ನು ಪ್ರಾರಂಭಿಸುವ ಮೊದಲು ಆತನನ್ನು ಮತ್ತೆ ಅಮಾನತುಗೊಳಿಸಲು ಯಾವುದೇ ಆಕ್ಷೇಪವಿಲ್ಲ.

(ಬಿ) ತನಿಖೆ ಪ್ರಗತಿಯಲ್ಲಿರುವಾಗ ಸರ್ಕಾರಿ ನೌಕರನನ್ನು ಅಮಾನತುಗೊಳಿಸಿದ್ದಲ್ಲಿ, ಅಥವಾ ತನಿಖೆಯ ಮುಕ್ತಾಯದ ಮತ್ತು ವಿಚಾರಣೆ/ಅಧಿವಿಚಾರಣೆಯ ಪ್ರಾರಂಭದ ನಡುವಿನ ಯಾವುದೇ ಸಮಯದಲ್ಲಿ, ಅಮಾನತು ದಿನಾಂಕದಿಂದ ಮೂರು ತಿಂಗಳೊಳಗೆ ವಿಚಾರಣೆ/ಅಧಿವಿಚಾರಣೆಯನ್ನು ಪ್ರಾರಂಭಿಸಿರದಿದ್ದರೆ, ಆತನನ್ನು ಮತ್ತೆ ಸೇವೆಗೆ ಸೇರಿಸಿಕೊಳ್ಳಬೇಕು;

(ಸಿ) ತನಿಖೆ/ವಿಚಾರಣೆ/ಅಧಿವಿಚಾರಣೆಯು ಪ್ರಗತಿಯಲ್ಲಿದ್ದಾಗ, ಅಥವಾ ತನಿಖೆಯ ಮುಕ್ತಾಯದ ಮತ್ತು ವಿಚಾರಣೆ/ಅಧಿವಿಚಾರಣೆಯ ಪ್ರಾರಂಭದ ನಡುವಿನ ಯಾವುದೇ ಸಮಯದಲ್ಲಿ, ಸರ್ಕಾರಿ ನೌಕರನನ್ನು ಅಮಾನತುಗೊಳಿಸಿದಲ್ಲಿ, ವಿಚಾರಣೆ/ಅಧಿವಿಚಾರಣೆಯ ಪ್ರಾರಂಭದ ದಿನಾಂಕದಿಂದ ಅಥವಾ ಅಮಾನತು ದಿನಾಂಕದಿಂದ, ಇವೆರಡರಲ್ಲಿ ಯಾವುದು ತರುವಾಯದ್ದೋ ಆ ದಿನಾಂಕದಿಂದ, ಆತನ ಅಮಾನತು ಅವಧಿಯನ್ನು ಒಂಬತ್ತು ತಿಂಗಳು ಮೀರಿ ವಿಸ್ತರಿಸಬಾರದು;  ಇತ್ತೀಚಿನ ಸುತ್ತೋಲೆಯು ಸಂಖ್ಯೆ, ಸಿಆಸುಇ 2 ಸೇಇವಿ 2003 ದಿನಾಂಕ 6-2-2003 ನ್ನು ಹೊಂದಿದೆ.ವಾಸ್ತವವಾಗಿ, ಸರ್ಕಾರವು 11-09-2003 ರಂದು ಆದೇಶವನ್ನು ಸಹ ಹೊರಡಿಸಿದ್ದು, ಅದರಲ್ಲಿ, ಶಿಸ್ತು ವ್ಯವಹರಣೆಗಳನ್ನು ಪೂರ್ಣಗೊಳಿಸುವಲ್ಲಿ ಅನಗತ್ಯ ವಿಳಂಬವನ್ನು ತಪ್ಪಿಸಲು, ಶಿಸ್ತು ವ್ಯವಹರಣೆಗಳನ್ನು ಪೂರ್ಣಗೊಳಿಸುವುದಕ್ಕೆ ಕಾಲಮಿತಿಯನ್ನು ನಿಗದಿಪಡಿಸಲಾಗಿದೆ.

21. ಅರ್ಜಿದಾರರು ಹೊಂದಿರುವ ಹುದ್ದೆಯಷ್ಟರಮಟ್ಟಿಗೆ ಶಿಸ್ತು ಪ್ರಾಧಿಕಾರ ನೇಮಕಾತಿ ಪ್ರಾಧಿಕಾರವು ವಿಶೇಷ ಮಂಡಳಿಯಾಗಿದೆ.ವಿಶೇಷ ಮಂಡಳಿಯನ್ನು ಸರ್ಕಾರದ ಮಂಡಳಿಗೆ ಸಮನಾಗಿಸಲು ಸಾಧ್ಯವಿಲ್ಲ.ಕಾರಣ, ಅಧಿಕೃತ ಎದುರುದಾರರು ವಿಶೇಷ ಮಂಡಳಿಯನ್ನು ಸರ್ಕಾರದ ಮಂಡಳಿಗೆ ಸಮನಾಗಿಸುವಂತಹ ಯಾವುದೇ ಶಾಸನಬದ್ಧ ಉಪಬಂಧವನ್ನು ಸೂಚಿಸಿಲ್ಲ.ಈ ಹಿನ್ನೆಲೆಯಲ್ಲಿ, ಕರ್ನಾಟಕ ಸಿವಿಲ್ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಅಪೀಲು) ನಿಯಮಗಳು, 1957 ರ 10 ನೇ ನಿಯಮದ 6 ನೇ ಉಪನಿಯಮವನ್ನು ಪರಿಶೀಲಿಸುವ ಅವಶ್ಯಕತೆಯಿದೆ.ಅದನ್ನು ಈ ಮುಂದಿನಂತೆ ಓದಲಾಗಿದೆ:

" ಸರ್ಕಾರವನ್ನು ಹೊರತುಪಡಿಸಿ ಇತರ ಪ್ರಾಧಿಕಾರಿಯು ಸರ್ಕಾರಿ ನೌಕರನನ್ನು ಅಮಾನತುಗೊಳಿಸಿರುವಲ್ಲಿ ಮತ್ತು ಅವನ ವಿರುದ್ಧ ವಿಚಾರಣೆಯು ಇತ್ಯರ್ಥದಲ್ಲಿರುವಾಗ ಅಂತಿಮ ಆದೇಶಗಳನ್ನು ಅಮಾನತು ಆದೇಶದ ದಿನಾಂಕದಿಂದ ಆರು ತಿಂಗಳ ಅವಧಿಯೊಳಗೆ ಹೊರಡಿಸದಿದ್ದರೆ, 1 [ನೇಮಕಾತಿ ಪ್ರಾಧಿಕಾರವು ಆ

ಪ್ರಕರಣವನ್ನು ಪರಿಶೀಲಿಸತಕ್ಕದ್ದು ಮತ್ತು ಸರ್ಕಾರಿ ನೌಕರರನ್ನು ಅಮಾನತ್ತಿನಲ್ಲಿರಿಸಿರುವುದನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ತಾನು ಸೂಕ್ತವೆಂದು ಭಾವಿಸಬಹುದಾದಂತೆ ೧ ತೀರ್ಮಾನವನ್ನು ತೆಗೆದುಕೊಳ್ಳತಕ್ಕದ್ದು].

ಮೇಲ್ಕಂಡ ಉಪಬಂಧದ ಪ್ರಕಾರ, ವಿಶೇಷ ಮಂಡಳಿಯು, ಅರ್ಜಿದಾರನ ಪ್ರಕರಣವನ್ನು ಪರಿಶೀಲಿಸುವಷ್ಟರಮಟ್ಟಿಗೆ ಮತ್ತು ಅರ್ಜಿದಾರನನ್ನು ಅಮಾನತ್ತಿನಲ್ಲಿರುವ ಅರ್ಜಿದಾರನ ಮು ಂ ದುವರಿಕೆಯು 6 ತಿಂಗಳು ಮೀರಿದೆಯೇ?ಎಂಬ ನಿರ್ಧಾರವನ್ನು ಕೈಗೊಳ್ಳುವಷ್ಟರಮಟ್ಟಿಗೆ ಮಾತ್ರ ಮೇಲೆ ಹೇಳಲಾದ ಉಪಬಂಧಕ್ಕೆ ಬದ್ಧವಾಗಿದೆ.ವಿಶೇಷ ಮಂಡಳಿಯು ಇಂದಿಗೂ ಈ ಮೇಲಿನ ಉಪಬಂಧಕ್ಕೆ ಬದ್ಧವಾಗಿಲ್ಲ.

22. ಅಧಿಕೃತ ಎದುರುದಾರರು/ಸಕ್ಷಮ ಪ್ರಾಧಿಕಾರವು ಕೆಸಿಎಸ್‌ಆರ್ ನ 98 ನೇ ನಿಯಮವನ್ನು ನೌಕರ/ಅಧಿಕಾರಿಯನ್ನು ಅಮಾನತುಗೊಳಿಸುವುದನ್ನು ನಿಯಂತ್ರಿಸುವುದಕ್ಕೆ ಸಂಬಂಧಿಸಿದಂತೆ, ಕಾಲಕಾಲಕ್ಕೆ ಹೊರಡಿಸಲಾದ ಡಿಪಿಎಆರ್ ಆದೇಶ/ಸುತ್ತೋಲೆಯೊಂದಿಗೆ ಓದಲಾದ, ಮೇಲೆ ಉಲ್ಲೇಖಿಸಲಾದ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಗಮನಿಸಲು ಮತ್ತು ಅಮಾನತಿನ ಪರಿಶೀಲನೆಯನ್ನು ಕೈಗೊಳ್ಳಲು ವಿಫಲವಾಗಿದೆ.ಮೇಲ್ನೋಟಕ್ಕೆ, ಅಧಿಕೃತ ಎದುರುದಾರರು/ಸಕ್ಷಮ ಪ್ರಾಧಿಕಾರವು ಈ ಮೇಲೆ ಹೇಳಲಾದ ತೀರ್ಮಾನವನ್ನು, ಕೆಸಿಎಸ್‌ಆರ್ ನ 98 ನೇ ನಿಯಮವನ್ನು ಮತ್ತು ಸರ್ಕಾರಿ ಆದೇಶಗಳನ್ನು ಪಾಲಿಸಲು ಬದ್ಧರಾಗಿಲ್ಲ ಹಾಗೂ ಕಾಲಕಾಲಕ್ಕೆ ಅಮಾನತಿನ ಪುನರ್ಪರಿಶೀಲನೆಯನ್ನು ಕೈಗೊಳ್ಳಲು ವಿಫಲವಾಗಿದೆ.

23. ಈ ಸಂಗತಿಗಳು ಮತ್ತು ಸನ್ನಿವೇಶಗಳ ಹಿನ್ನೆಲೆಯಲ್ಲಿಟ್ಟುಕೊಂಡು ಮತ್ತು ಅಮಾನತು ಆದೇಶವುದಿನಾಂಕ: 27-12-2018ರ ದಿನಾಂಕದ್ದಾಗಿದೆ ಎಂಬ ಸಂಗತಿಯ ದೃಷ್ಟಿಯಿಂದ, ವಿಚಾರಣಾ ಪ್ರಾಧಿಕಾರವು ವಿಚಾರಣಾ ವ್ಯವಹರಣೆಗಳನ್ನು ಪೂರ್ಣಗೊಳಿಸಲು 3 ತಿಂಗಳ ಕಾಲಮಿತಿಯನ್ನು ನಿಗದಿಪಡಿಸಿದ್ದರೂ ಸಹ,ದಿನಾಂಕ: 26-02-2019ರಿಂದದಿನಾಂಕ: 03-09-2019ರವರೆಗಿನ ಅವಧಿಯಲ್ಲಿ ವಿಚಾರಣಾ ವ್ಯವಹರಣೆಗಳನ್ನು ಪೂರ್ಣಗೊಳಿಸಿಲ್ಲ.ಅದಲ್ಲದೆ, ದಾಖಲೆಗಳ ಪರಿಶೀಲನೆಯಿಂದ ಅರ್ಜಿದಾರರನ್ನು ಎರಡು ವಾರಗಳ ಅವಧಿಯೊಳಗೆ ತನ್ನ ವಿವರಣೆಯನ್ನು ಸಲ್ಲಿಸುವಂತೆ ಕೇಳುವಾಗದಿನಾಂಕ: 02-02-2019ರಂದು ವಿಚಾರಣೆ ಪ್ರಾರಂಭಿಸಲಾಯಿತು ಎಂಬುದು ಸ್ಪಷ್ಟವಾಗಿದೆ.ದಿನಾಂಕ: 26-02-2019ರಂದು, ಆರೋಪಗಳ ಪಟ್ಟಿಗೆ ಅರ್ಜಿದಾರನು ನೀಡುವ ವಿವರಣೆಗೆ ಕಾಯದೆ ವಿಚಾರಣಾ ಪ್ರಾಧಿಕಾರ ಮತ್ತು ಮಂಡನಾಧಿಕಾರಿಯನ್ನು ನೇಮಿಸಲಾಯಿತು.ಆದರೆ, ಅರ್ಜಿದಾರನು ಆರೋಪಗಳ ಪಟ್ಟಿಗೆದಿನಾಂಕ: 22-05-2019ರಂದು ತನ್ನ ವಿವರಣೆಯನ್ನು ಸಲ್ಲಿಸಿದನು.ಶಿಸ್ತು ಪ್ರಾಧಿಕಾರವು 1957 ರ ನಿಯಮಾವಳಿಗಳ 11 ನೇ ನಿಯಮದ 4 ರಿಂದ 6 ರವರೆಗಿನ ಉಪನಿಯಮಗಳನ್ನು ಪಾಲಿಸಬೇಕಾಗಿತ್ತು.ದಿನಾಂಕ: 22-05-2019ರ ಆರೋಪಗಳ ಪಟ್ಟಿಗೆ ಅರ್ಜಿದಾರನ ವಿವರಣೆಯನ್ನು ಪರಿಗಣಿಸಿಲ್ಲ ಎಂಬುದು ದಾಖಲೆಗಳಿಂದ ಸ್ಪಷ್ಟವಾಗಿದೆ.ಅದಕ್ಕಿಂತ ಹೆಚ್ಚಾಗಿ, ಕಳೆದ ಒಂದೂವರೆ ವರ್ಷದಿಂದ ಅರ್ಜಿದಾರನನ್ನು ಅಮಾನತಿನಲ್ಲಿಟ್ಟು, ಅವನಿಂದ ಕೆಲಸ ಮಾಡಿಸದೆ ಜೀವನಾಧಾರ ಭತ್ಯೆಯನ್ನು ಪಾವತಿಸುವುದರಿಂದ ರಾಜ್ಯ ಬೊಕ್ಕಸಕ್ಕೆ ಹೊರೆಯಾಗುತ್ತದೆ.

ಫಲತಾಂಶ:

ತದನುಸಾರವಾಗಿ, ರಿಟ್ ಅರ್ಜಿಯು ಈ ಕೆಳಗಿನ ಷರತ್ತುಗಳೊಂದಿಗೆ ವಿಲೇವಾರಿಯಾಗುತ್ತದೆ.

( i) ಅರ್ಜಿದಾರನು ಸಾಧ್ಯವಾದಷ್ಟು ಬೇಗನೆ ಎದುರುದಾರರಿಗೆ ಪರ್ಯಾಯ ಬ್ಯಾಂಕ್ ಖಾತೆಯ ವಿವರಗಳನ್ನು ಒದಗಿಸಬೇಕೆಂದು ಈ ಮೂಲಕ ನಿರ್ದೇಶಿಸಲಾಗಿದೆ.

ಅರ್ಜಿದಾರನು ಒದಗಿಸಿದ ಪರ್ಯಾಯ ಬ್ಯಾಂಕ್ ಖಾತೆಗೆ ಜಮೆ ಮಾಡುವ ಮೂಲಕ ಜೀವನಾಧಾರ ಭತ್ಯೆಯನ್ನು ಬಾಕಿ ಹಣವನ್ನು ವಿತರಣೆ ಮಾಡುವಂತೆ ಸಕ್ಷಮ ಪ್ರಾಧಿಕಾರಕ್ಕೆ ಈ ಮೂಲಕ ನಿರ್ದೇಶಿಸಲಾಗಿದೆ.

(iii) ಈ ಆದೇಶವನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ವಾರಗಳ ಅವಧಿಯೊಳಗೆ ಶಿಸ್ತು ವ್ಯವಹರಣೆಗಳ ಫಲಿತಾಂಶಕ್ಕೊಳಪಟ್ಟು, ಅರ್ಜಿದಾರನನ್ನು D ಮತ್ತೆ ಸೇವೆಗೆ ಸೇರಿಸಿಕೊಳ್ಳತಕ್ಕದ್ದು.

(iv) ಶಿಸ್ತು ವ್ಯವಹರಣೆಗಳು ಪೂರ್ಣಗೊಂಡ ಮೇಲೆ ಅಮಾನತು ೨ ಅವಧಿಯನ್ನು ನಿಯಂತ್ರಣಗೊಳಿಸತಕ್ಕದ್ದು.

(v) ರಿಟ್ ಅರ್ಜಿ ಸಂಖ್ಯೆ.11518/2019 ರಲ್ಲಿ ಹೊರಡಿಸಲಾದದಿನಾಂಕ: 04-09-2019ರ ಆದೇಶವನ್ನು ಮಾರ್ಪಾಡು ಮಾಡುವುದಕ್ಕೆ ಸಂಬಂಧಿಸಿದಂತೆ, ಅಗತ್ಯ ಅರ್ಜಿಯನ್ನು ಸಲ್ಲಿಸಲು ಅಧಿಕೃತ ಎದುರುದಾರರಿಗೆ ಸ್ವಾತಂತ್ರ್ಯವಿದೆ.ಮೂಲಕ, ವಿಚಾರಣಾ ಪ್ರಾಧಿಕಾರವನ್ನು ಆದೇಶ ಹೊರಡಿಸುವುದರಿಂದ ನಿರ್ಬಂಧಿಸಲಾಗಿದೆ.